ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿರುದ್ಧ ಜಾನ್ ಡಿಸೋಜಾ

ರಿಟ್ ಅರ್ಜಿ ಸಂ. 63562/2016 (ಎಲ್-ಕೆಎಸ್‌ಆರ್‌ಟಿಸಿ), ದಿನಾಂಕ 20 ನೇ ಸೆಪ್ಟೆಂಬರ್, 2017

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಿ. ನರೇಂದರ್:

ಅರ್ಜಿದಾರರ ಪರ ಮಾನ್ಯ ವಕೀಲರು ಹಾಗೂ ಪ್ರತ್ಯರ್ಜಿದಾರ/ಪಕ್ಷಕಾರರೇ ಖುದ್ದಾಗಿ ವಾದಿಸಿದ ವಾದಗಳನ್ನು ಆಲಿಸಲಾಗಿದೆ.

2. ಈ ನ್ಯಾಯಾಲಯವು, ನ್ಯಾಯಾಧಿಕರಣ, ಪ್ರಸ್ತುತ ಸದರಿ ನ್ಯಾಯಾಲಯ ಹಾಗೂ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪಕ್ಷಕಾರರ ನಡುವಿನ ವ್ಯಾಜ್ಯದ ಅಸಂಖ್ಯಾತ ಸುತ್ತುಗಳ ಹಿನ್ನೆಲೆಯಲ್ಲಿನ ವಾಸ್ತವಾಂಶಗಳ ವಿವರವಾದ ಪರಿಶೀಲನೆಯನ್ನು ಆರಂಭಿಸಿರುತ್ತದೆ.

3. ಪ್ರಕರಣದ ವಿಲೆಗೆ ಅವಶ್ಯಕವಾಗಿರುವ ವಿವರವಾದ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ.ಪ್ರತ್ಯರ್ಜಿದಾರನು, ಅರ್ಜಿದಾರ-ನಿಗಮದಲ್ಲಿ ನಿರ್ವಾಹಕನಾಗಿ ಕಾರ್ಯ ನಿರ್ವಹಿಸುತ್ತಿದ್ದು, ಮಂಗಳೂರು ವಿಭಾಗದಿಂದ ವರ್ಗಾವಣೆಯಾಗಿ, ಬಿಡುಗಡೆಗೊಂಡು ಬೆಂಗಳೂರು ಗ್ರಾಮಾಂತರ ವಿಭಾಗದ ಕನಕಪುರ ಡಿಪೋದಲ್ಲಿ ನಿಯೋಜನೆಗೊಂಡಿರುತ್ತಾನೆ.ಆಗ ಈತನಿಗೆದಿನಾಂಕ: 01.08.2005 ರಿಂದ 07.08.2005 ರ ವರೆಗೆ ಏಳು ದಿನಗಳ ಸೇರಿಕೊಳ್ಳುವ ಅವಧಿಯನ್ನು ನೀಡಲಾಗಿತ್ತು.ತರುವಾಯ ಕರ್ತವ್ಯಕ್ಕೆ ವರದಿ ಮಾಡಿಕೊಂಡು, ಎರಡು ದಿನಗಳ ಕಾಲ ಕಾರ್ಯ ನಿರ್ವಹಿಸಿ, ನಂತರದಿನಾಂಕ: 12.08.2005 ರಿಂದದಿನಾಂಕ: 14.08.2005 ರ ವರೆಗೆ ಸಾಂದರ್ಭಿಕ ರಜೆಯನ್ನು ತೆಗೆದುಕೊಂಡುದಿನಾಂಕ: 15.08.2005 ರಂದು ರಾಷ್ಟ್ರೀಯ ರಜೆ ಇದ್ದ ಕಾರಣ,ದಿನಾಂಕ: 16.08.2005 ರಂದು ಕರ್ತವ್ಯಕ್ಕೆ ಹಾಜರಾಗಿ,ದಿನಾಂಕ: 17.08.2005 ರ ವರೆಗೆ ಕಾರ್ಯ ನಿರ್ವಹಿಸಿರುತ್ತಾನೆ.

4. ಆ ತರುವಾಯ,ದಿನಾಂಕ: 18.8.2005 ರಿಂದದಿನಾಂಕ: 28.8.2005 ರ ವರೆಗೆ ಅರ್ಜಿದಾರನು ರಜೆಯ ಪೂರ್ವ ಮಂಜೂರಾತಿಯಿಲ್ಲದೆ ಗೈರುಹಾಜರಾಗಿರುತ್ತಾನೆ.ಹಾಗಾಗಿ, ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂತೆದಿನಾಂಕ: 24.08.2005 ರಂದು ಟ್ರಾಫಿಕ್ ಮ್ಯಾನೇಜರ್‌ವರು ಒಂದು ವರದಿಯನ್ನು ಸಿದ್ಧಪಡಿಸಿ, ಈತನ ಅನಧಿಕೃತ ಗೈರುಹಾಜರಿಯ ಕಾರಣದಿಂದ ಸೇವೆ ಸಲ್ಲಿಸದೆ, ಡಿಪೋ ಹಣಕಾಸಿನ ಹಾನಿಯನ್ನು ಅನುಭವಿಸಿದ್ದಲ್ಲದೆ, ಪ್ರಯಾಣಿಕರಿಗೆ ಅನಾನುಕೂಲವುಂಟಾಯಿತೆಂದು ತಿಳಿಸಿ,ದಿನಾಂಕ: 25.8.2005 ರಂದು ಡಿಪೋ ಮ್ಯಾನೇಜರ್ ಮೂಲಕ ವಿಭಾಗೀಯ ನಿಯಂತ್ರಕರಿಗೆ ಕಳುಹಿಸುತ್ತಾನೆ.ಹಾಗಾಗಿ, ಶಿಸ್ತು ಪ್ರಾಧಿಕಾರವು ಈ ಪ್ರಕರಣವು ವಿಚಾರಣೆಗೆ ಆದೇಶಿಸಲು ತಕ್ಕುದೆಂದು ಭಾವಿಸುತ್ತದೆ.ಇದು ಪ್ರತ್ಯರ್ಜಿದಾರ ನಿರ್ವಾಹಕರ ವಿರುದ್ಧದ ವಾದದ ತಿರುಳಾಗಿರುತ್ತದೆ.

5. ತದನುಸಾರವಾಗಿ,ದಿನಾಂಕ: 23.06.2006 ರಂದು ಆರೋಪಗಳ ಪಟ್ಟಿಯನ್ನು ನೀಡಲಾಯಿತು.ವಿಚಾರಣಾಧಿಕಾರಿಯು ವಿಚಾರಣೆ ನಡೆಸಿರುತ್ತಾರೆ ಮತ್ತು ಎಂ .1 ರಿಂದ ಎಂ .6 ರ ವರೆಗಿನ ದಸ್ತಾವೇಜುಗಳನ್ನು ಗುರುತು ಮಾಡಲಾಗಿರುತ್ತದೆ.ಎಂ .1 ಡಿಪೋ ಮ್ಯಾನೇಜರ್‌ವರ ವರದಿಯಾಗಿದ್ದು, ಎಂ .2 ರಜಾ ಅರ್ಜಿಯಾಗಿರುತ್ತದೆ.ಎಂ .3 ಯು ಡಿಪೋ ಮ್ಯಾನೇಜರ್‌ವರ ಮೂಲಕ ಆಡಳಿತಾಧಿಕಾರಿಗೆ ಸಲ್ಲಿಸಿದ ವರದಿಯಾಗಿರುತ್ತದೆ.ಎಂ .4 ರಿಂದ ಎಂ .6 ಗಳು ಹಾಜರುಪಟ್ಟಿಗಳಾಗಿರುತ್ತವೆ.ವಿಚಾರಣಾಧಿಕಾರಿಗಳು ಎಂ.ಡಬ್ಲ್ಯು ಅಶ (ಕೆ.ಕೆ. ವೇಣುಗೋಪಾಲ್) ಹಾಗೂ ಎಂ.ಡಬ್ಲ್ಯೂ (ಮುತ್ತುರಾಜ್) ರ ಸಾಕ್ಷ್ಯ ಎಣಿ ಹಾಗೂ ಅವರ ಪಾಟೀ ಸವಾಲನ್ನು ದಾಖಲಿಸಿಕೊಂಡ ತರುವಾಯ, ಆರು ದಿನಾಂಕಗಳ ಮೇಲಿನ ಸುನಾವಣೆಯನ್ನು ಮುಂದೂಡಿದರೂ ಸಹ ಕರ್ತವ್ಯಚ್ಯುತ ಅಧಿಕಾರಿಯು, ದಾಖಲೆಯ ಮೂಲಕ ಯಾವುದೇ ವಸ್ತುವಿಷಯವನ್ನು ಮಂಡಿಸಲು ವಿಫಲವಾಗಿರುವುದರಿಂದ, ಕರ್ತವ್ಯಚ್ಯುತ ಕೆಲಸಗಾರನ ಕಡೆಯ ಸಾಕ್ಷ್ಯವನ್ನು

ಮುಕ್ತಾಯಗೊಳಿಸಿರುತ್ತಾನೆ ಹಾಗೂ ಆ ತರುವಾಯ ವಿಚಾರಣಾಧಿಕಾರಿಯು ಆತನ ವರದಿಯನ್ನು ರುಜುವಾತುಪಡಿಸಿ, ಮುಂದಕ್ಕೆ ಕಳುಹಿಸಿರುವುದರಿಂದ ಆರೋಪಗಳನ್ನು ಹೊರಿಸಿರುತ್ತಾರೆ.

6. ಸದರಿ ವಿಚಾರಣಾ ವರದಿಯನ್ನು ಆಧರಿಸಿ ಶಿಸ್ತುಪ್ರಾಧಿಕಾರವು,ದಿನಾಂಕ: 31.08.2010 ರಂದು ಕಾರಣ ಕೇಳುವ ನೋಟೀಸನ್ನು ನೀಡಿದ್ದು, ಇದಕ್ಕೆ ಪ್ರತ್ಯರ್ಜಿದಾರ ಕೆಲಸಗಾರರಿಂದ ವಿವರಣಾತ್ಮಕ ಉತ್ತರವನ್ನು ಪಡೆಯಲಾಗಿರುತ್ತದೆ.ಶಿಸ್ತು ಪ್ರಾಧಿಕಾರವು ಈ ಉತ್ತರಕ್ಕೆ ತನ್ನ ಅಸಮಾಧಾನವನ್ನೇ ತೋರಿದ್ದು, ಮುಂದೆ ಈತನ ದುರ್ವರ್ತನೆಯ ವಿರುದ್ಧ ಇತ್ಯರ್ಥದಲ್ಲಿರುವ ಹಲವಾರು ನಡಾವಳಿಗಳನ್ನು ಕುರಿತಂತೆ ತನ್ನ ಸಮ್ಮತಿಯನ್ನು ನೀಡಿ ಪ್ರತ್ಯರ್ಜಿದಾರನನ್ನು ಅರ್ಜಿದಾರ-ನಿಗಮದ ಸೇವೆಯಿಂದ ತೆಗೆದುಹಾಕಿ ವಜಾ ಆದೇಶವನ್ನು ಹೊರಡಿಸಿರುತ್ತದೆ.

7. ಆ ವಿವಾದವನ್ನು ಆಇಎಫ್ಸಂಖ್ಯೆ: 243/2006 ರಲ್ಲಿ ಪ್ರಸ್ತಾಪಿಸಲಾಗಿದ್ದು, ಸದರಿ ವಿವಾದವು ಇತ್ಯರ್ಥದಲ್ಲಿರುವ ಪರಿಗಣನೆಯಾಗಿರುವುದರಿಂದ, ಅರ್ಜಿದಾರ ನಿಗಮವು, ಕೈಗಾರಿಕಾ ವಿವಾದಗಳ ಅಧಿನಿಯಮ, (ಇನ್ನು ಮುಂದೆ ಸಂಕ್ಷಿಪ್ತವಾಗಿ ಐ.ಡಿ. ಅಧಿನಿಯಮವೆಂದು ಉಲ್ಲೇಖಿಸಲಾಗಿರುತ್ತದೆ) ದ 33 ( 2) (ಬಿ) ಪ್ರಕರಣದ ಉಪಬಂಧಗಳ ಮೂಲಕ ಆಜ್ಞಾಪಕದಂತೆ ಮಂಜೂರಾತಿಗಾಗಿ ಕೋರಿದ ಅರ್ಜಿಯನ್ನು ಸಲ್ಲಿಸಿರುತ್ತವೆ.ಸದರಿ ಅರ್ಜಿಗೆ ಎಸ್.ಎ.ಸಂ .1/2010 ಎಂದು ಸಂಖ್ಯೆ ಕೊಡಲಾಗಿರುತ್ತದೆ.ನಿಗಮವು ಎಂ ರಿಂದ ಎ - 34 ರ ವರೆಗಿನ ನಿಶಾನೆ ದಸ್ತಾವೇಜುಗಳನ್ನು ಗುರುತು ಮಾಡಲಾಗಿರುತ್ತದೆ ಹಾಗೂ ಇಬ್ಬರು ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದ್ದು, ಅದರಲ್ಲಿ ಒಬ್ಬರು ರಂಗಸ್ವಾಮಿ, ನಿವೃತ್ತ ಕಾನೂನು ಅಧಿಕಾರಿಗಳು ಇವರು ಆನುಷಂಗಿಕವಾಗಿ ವಿಚಾರಣಾಧಿಕಾರಿಗಳೂ ಆಗಿರುತ್ತಾರೆ.(ಎ.ಡಬ್ಲ್ಯು -1) ಹಾಗೂ ಮತ್ತೊಬ್ಬರು ಎಸ್. ರವಿ (ಮೇಲ್ವಿಚಾರಕರು) (ಎಡಬ್ಲ್ಯು -2) ಕಾರ್ಮಿಕ ನ್ಯಾಯಾಲಯದ ಎದುರು ವಿಚಾರಣೆ ಮಾಡಿದಂಥ ಸಾಕ್ಷಿದಾರರು, ಅವರ ವಾದಕ್ಕೆ ಪೂರಕವಾಗಿ ವಿಚಾರಣೆಯ ಸಮಯದಲ್ಲಿ ವಿಚಾರಣೆ ಮಾಡಿದವರಿಗಿಂತ ಬೇರೆಯೇ ಸಾಕ್ಷಿದಾರರಾಗಿರುತ್ತಾರೆಂಬುದನ್ನು ಗಮನಿಸಬೇಕಾದುದು ಸಮಂಜಸವಾದುದಾಗಿರುತ್ತದೆ.( ಈ ನ್ಯಾಯಾಲಯವು ಇದಕ್ಕೆ ಒತ್ತು ನೀಡುತ್ತದೆ). ಕೆಲಸಗಾರನೇ ಸ್ವತಃ ಪ್ರತ್ಯರ್ಜಿದಾರ ಸಾಕ್ಷಿದಾರನೆಂದು ವಿಚಾರಣೆಗೆ ಒಳಪಟ್ಟಿರುತ್ತಾನೆ ಹಾಗೂ ಆರ್ .1 ರಿಂದ ಆರ್ .104 ರ ವರೆಗಿನ ನಿಶಾನೆಗಳನ್ನು ಗುರುತು ಮಾಡಲಾಗಿರುತ್ತದೆ.ಕಾರ್ಮಿಕ ನ್ಯಾಯಾಲಯವು ತನ್ನ ಮುಂದೆ ಮಂಡಿಸಿದ ವಿಷಯದ ಹಿನ್ನೆಲೆಯಲ್ಲಿ ವಾಸ್ತವಾಂಶಗಳನ್ನು ಪರಿಶೀಲಿಸಿದ ತರುವಾಯ, ಅರ್ಜಿದಾರ ನಿಗಮವು ನಡೆಸಿದ ವಿಚಾರಣೆಯು ನ್ಯಾಯೋಚಿತವು ಹಾಗೂ ಯುಕ್ತವಾದುದು ಆಗಿರುತ್ತದೆಂದು ಅಭಿಪ್ರಾಯವಿದೆ.ಆದರೆ, ಮುಂದುವರೆದು, ಇದುದಿನಾಂಕ: 06.11.2013 ರ ತನ್ನ ಐತೀರ್ಪಿನ ಮೂಲಕ ಬಲಿಪಶು ಮಾಡುವ ಹಾಗೂ ದ ಂ ಡನೆಯ ಅನುಪಾತದ ಆಧಾರದ ಮೇಲೆ ನಿಗಮದ ವಿರುದ್ಧ ಅಭಿಪ್ರಾಯಪಟ್ಟಿರುತ್ತದೆ.ಐತೀರ್ಪಿನಿಂದ ಬಾಧಿತವಾದ ಅರ್ಜಿದಾರರು ರಿಟ್ ಅರ್ಜಿಸಂಖ್ಯೆ: 10271/2014 ನ್ನು ಸಲ್ಲಿಸಿರುತ್ತಾರೆ.

8. ಮೇಲಿನ ರಿಟ್ ಅರ್ಜಿಯಲ್ಲಿ, ಕಾರ್ಮಿಕ ನ್ಯಾಯಾಲಯವು, ವಿಷಯದ ಗುಣಾರ್ಹತೆಗಳ ಆಧಾರದ ಮೇಲೆ ಸಾಕ್ಷ್ಯಗಳನ್ನು ನೀಡಲು ಪ್ರತ್ಯರ್ಜಿದಾರರಿಗೆ ಅನುಮತಿಸಿ, ಐ.ಡಿ. ಅಧಿನಿಯಮದ 33 ( 2) (ಬಿ) ಪ್ರಕರಣದಡಿಯಲ್ಲಿ ಅನುಮೋದನೆಗೆ ಸಂಬಂಧಿಸಿದ ಅರ್ಜಿಗೆ ಸಂಬಂಧಿಸಿದ ವಿಚಾರಣೆಯ ಸಂಬಂಧದಲ್ಲಿ ಕಾರ್ಮಿಕ ನ್ಯಾಯಾಲಯವು ದಾಖಲೆ ಮೇಲಿನ ಮುಖ್ಯವಾದ ಸಾಕ್ಷ್ಯವನ್ನು ಮಾತ್ರ ಗಮನಿಸಬೇಕೆಂದು ಹಾಗೂ ಪರಿಶೀಲಿಸಬೇಕೆಂದೂ ಅಗತ್ಯಪಡಿಸಿರುತ್ತದೆಂದೂ ಸಂಸ್ಥೆ ನಡೆಸಿರುವ ವಿಚಾರಣೆಯಲ್ಲಿ ದಾಖಲಿಸಿರುವ ನಿರ್ಣಯಗಳು ನ್ಯಾಯಯುತವೂ ಹಾಗೂ ಯುಕ್ತವಾದವೂ ಆಗಿದೆಯೆಂದೂ ತನ್ನ ತೀರ್ಪು ನೀಡಿ ಗಂಭೀರ ಸ್ವರೂಪದ ತಪ್ಪನ್ನು ಎಸಗಿದೆಯೆಂದೂ ವಾದಿಸಲಾಗಿರುತ್ತದೆ.ಅಂಥ ವಾದವನ್ನು ಈ ನ್ಯಾಯಾಲಯದ ಮುಂದೆ ಮಂಡಿಸಿ, ಹೆಚ್ಚುವರಿ ಸಾಕ್ಷ್ಯವನ್ನು ನೀಡಿದವರು, ಹೆಚ್ಚುವರಿ ದಸ್ತಾವೇಜುಗಳನ್ನು ಗುರುತು ಮಾಡಿದವರು ಹಾಗೂ ವಿಚಾರಣಾಧಿಕಾರಿಗಳನ್ನು ಒಳಗೊಂಡಂತೆ ಇಬ್ಬರು ಹೆಚ್ಚುವರಿ ಸಾಕ್ಷಿದಾರರನ್ನು ಪರಿಶೀಲಿಸಿದವರು ಅರ್ಜಿದಾರರೇ ಎಂಬ ವಿಷಯವನ್ನು ಬಚ್ಚಿಟ್ಟಿರುತ್ತಾರೆ.( ಈ ನ್ಯಾಯಾಲಯವು ಇದಕ್ಕೆ ಅಡಿಗೆರೆಯನ್ನು ಹಾಕಿರುತ್ತದೆ). ಕಾರ್ಮಿಕ ನ್ಯಾಯಾಲಯವು ಬಲಿಪಶು ಮಾಡುವ ಹಾಗೂ ಅಸಮಾನುಪಾತದ ದಂಡನೆಯ ವಾದಕ್ಕೆ ಸಂಬಂಧಿಸಿದಂತೆ ಗುಣಾರ್ಹತೆಗಳ ಮೇಲಿನ ನಿರ್ಣಯವನ್ನು ಹೇಳುವ ಮೂಲಕ ದೋಷವನ್ನು ಎಸಗಿದೆ.ಈ ನ್ಯಾಯಾಲಯಕ್ಕೆ ವಿಧಿಸಿದ ದಂಡನೆಯ ಅನುಪಾತಕ್ಕೆ ಸಂಬಂಧಿಸಿದ ನಿರ್ಣಯವು ಅರ್ಜಿದಾರ ನಿಗಮವು ಹೊರಡಿಸಿದ ಈ ಮುಂಚಿನ ಆದೇಶಗಳ ಆಧಾರದ ಮೇಲಿರುತ್ತದೆಂಬುದು ಕಂಡು ಬಂದಿರುತ್ತದೆ.ಈ ನ್ಯಾಯಾಲಯಕ್ಕೆ ಇಂತಹುದೇ ಸಂದರ್ಭಗಳಲ್ಲಿ, ಶಿಸ್ತು ಪ್ರಾಧಿಕಾರವು ತನ್ನ ನೂರಾರು ಪ್ರಕರಣಗಳಲ್ಲಿ ಕಡಿಮೆ

ದಂಡನೆಯನ್ನೇ ವಿಧಿಸಿರುತ್ತದೆಂಬುದು ಕಂಡುಬಂದಿರುತ್ತದೆ.ಶಿಸ್ತು ಪ್ರಾಧಿಕಾರವು, ದಂಡನೆ ವಿಧಿಸುವಲ್ಲಿ ಪ್ರಾಧಿಕಾರಿಗಳು ಏಕರೂಪದ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕೆಂಬುದನ್ನು ನಿರ್ದಿಷ್ಟಪಡಿಸುವಂಥ ವ್ಯವಸ್ಥಾಪನಾ ನಿರ್ದೇಶಕರು ಹೊರಡಿಸಿರುವ ಸುತ್ತೋಲೆಯನ್ನು ಉಪೇಕ್ಷಿಸಿರುತ್ತದೆ.ಹಾಗಾಗಿ, ಕಾರ್ಮಿಕ ನ್ಯಾಯಾಲಯವು, ಪ್ರತ್ಯರ್ಜಿದಾರನು ಹೆಚ್ಚಿನ ದಂಡನೆಗೆ ಏಕಮಾತ್ರನಾಗುತ್ತಾನೆಂದೂ, ಅನುಮೋದನೆಗೆ ಸಂಬಂಧಿಸಿದ ಅರ್ಜಿಯನ್ನು ತಿರಸ್ಕರಿಸುವುದರ ಪರವಾಗಿ, ಯೋಜಿಸಬೇಕೆಂದು ಅಭಿಪ್ರಾಯಪಟ್ಟಿರುತ್ತದೆಂದು ಹೇಳಿ, ಈ ನ್ಯಾಯಾಲಯವು ಅರ್ಜಿಯ ತಿರಸ್ಕರಣೆಯನ್ನು ಎತ್ತಿಹಿಡಿದು, ತರುವಾಯ ರಿಟ್ ಅರ್ಜಿಯನ್ನು ವಜಾ ಮಾಡಿರುತ್ತದೆ.

9. ರಿಟ್ ಅರ್ಜಿಯನ್ನು ತಿರಸ್ಕರಿಸಿದುದರಿಂದ ಬಾಧಿತರಾದ ಅರ್ಜಿದಾರರು, ರಿಟ್ ಅಪೀಲು ಸಂ .30/2015 ನ್ನು ಸಲ್ಲಿಸಿರುತ್ತಾರೆ.ಸದರಿ ರಿಟ್ ಅಪೀಲಿನಲ್ಲಿ ಅರ್ಜಿದಾರ-ನಿಗಮವು, ಕೈಗಾರಿಕಾ ವಿವಾದಗಳ ಅಧಿನಿಯಮದ 33 ( 2) (ಬಿ) ಪ್ರಕರಣದ ಉಪಬಂಧಗಳಡಿಯಲ್ಲಿ ಅನುಮೋದನೆಯನ್ನು ಕೋರಿದ ಅರ್ಜಿಯ ಮೇಲೆ ವಿಚಾರಣೆಯ ಸಂಬಂಧದಲ್ಲಿನ ಮಿತಿಗಳನ್ನು ಕಾರ್ಮಿಕ ನ್ಯಾಯಾಲಯವು ಉಲ್ಲಂಘಿಸಿದೆ ಎಂದು ವಾದಿಸಿ, ವರದಿ ಮಾಡಿದ ಮಾರ್ಟಿನ್ ಬರ್ನ್ ಅ. -ವಿರುದ್ಧ ಆರ್. ಎನ್. ಬ್ಯಾನರ್ಜಿ - ಎಐಆರ್ 1958 ಎಸ್ಸಿ 79 ' ಯವರ ಪ್ರಕರಣದಲ್ಲಿ ನೀಡಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ.ನ್ಯಾಯಾಧಿಕರಣ ಅರ್ಜಿಯ ಗುಣಾರ್ಹತೆಗಳನ್ನು ಪರಿಗಣಿಸಬೇಕು ಮಾತ್ರವೇ ಹಾಗೂ ಉದ್ಯೋಗದಾತ ಹಾಗೂ ಕಾರ್ಮಿಕರ ನಡುವೆ ಕೈಗಾರಿಕಾ ವಿವಾದದ ನ್ಯಾಯ ನಿರ್ಣಯ ಮಾಡಬಾರದು.ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ಮುಖ್ಯಸ್ಥರಾಗಿರುವ ಈ ನ್ಯಾಯಾಲಯದ ಮಾನ್ಯ ವಿಭಾಗೀಯ ಪೀಠವು ನ್ಯಾಯಾಧಿಕರಣವು, ಕೈಗಾರಿಕಾ ವಿವಾದಗಳ 33 (2) (ಬಿ) ಪ್ರಕರಣದಡಿಯಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ, ಮಾರ್ಟಿನ್ ಬರ್ನ್ ಲಿ. ವಿರುದ್ಧ ಆರ್.ಎನ್. ಬ್ಯಾನರ್ಜಿ ಪ್ರಕರಣದಲ್ಲಿ ವಿಧಿಸಿದ ತತ್ವಗಳನ್ನು ಗಮನಿಸುವುದರಲ್ಲಿ ವಿಫಲವಾಗಿದೆ ಹಾಗೂ ಕಾರ್ಮಿಕ ನ್ಯಾಯಾಲಯವು ಕೈಗಾರಿಕಾ ವಿವಾದಗಳ ಅಧಿನಿಯಮದ 33 ( 2) (ಬಿ) ಪ್ರಕರಣದಡಿಯಲ್ಲಿನ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿರುತ್ತದೆಂಬ ತೀರ್ಮಾನಕ್ಕೆ ಬಂದಿರುತ್ತಾರೆ ಹಾಗೂ ಕಾರ್ಮಿಕ ನ್ಯಾಯಾಲಯವು ಹೊರಡಿಸಿದ ಐತೀರ್ಪನ್ನು ರದ್ದುಪಡಿಸಿ, ಹೊಸದಾಗಿ ಪರಿಗಣಿಸಲು ಕಾರ್ಮಿಕ ನ್ಯಾಯಾಲಯಕ್ಕೆ ವಿಷಯವನ್ನು ಹಿಂದಿರುಗಿಸಿರುತ್ತಾರೆ.ಹಾಗಾಗಿ ಸರಣಿ ಅರ್ಜಿ ಸಂಖ್ಯೆ .1/2010 ನ್ನು ಕಾರ್ಮಿಕ ನ್ಯಾಯಾಲಯವು ಮರು ಸುನಾವಣೆಗೆ ಕೈಗೆತ್ತಿಕೊಂಡಿರುತ್ತದೆ.

10. ಇದು ಪಕ್ಷಕಾರರ ನಡುವಿನ ವ್ಯಾಜ್ಯದ ಐದನೇ ಸುತ್ತಿನದಾಗಿದ್ದು, ಅನುಮೋದಿತ ಅರ್ಜಿಯ ಸಂಬಂಧದಲ್ಲಿ ಇದು ಆಇಎಫ್.ಸಂಖ್ಯೆ:243/2006 ರಲ್ಲಿ ಸರಣಿ ಅರ್ಜಿಸಂಖ್ಯೆ: 1/2010 ಎಂದು ಸಂಖ್ಯೆ ನೀಡಿರುವ ಏಕಮಾತ್ರ ಅರ್ಜಿಯಾಗಿರುತ್ತದೆ.ಅಂದರೆ, ಪಕ್ಷಕಾರರ ನಡುವಿನ ವ್ಯಾಜ್ಯವು, ವ್ಯಾಜ್ಯದ ಈ ಐದು ಸುತ್ತುಗಳಿಗೆ ಮಾತ್ರವೇ ಸೀಮಿತವಾಗಿರುತ್ತದೆಂದು ಹೇಳಲಾಗುವುದಿಲ್ಲ.ಇವುಗಳು, ಪಕ್ಷಕಾರರ ನಡುವೆ ನಡೆಯುತ್ತಲೇ ಇರುವ ಕಾನೂನು ಸಮರದ ಕೆಲವು ತುಣುಕುಗಳಾಗಿರುತ್ತವೆ.ಈ ನ್ಯಾಯಾಲಯವು, ಅನುಸರಿಸುವ ಕಾರಣಗಳಿಗಾಗಿ ಪಕ್ಷಕಾರರ ನಡುವಿನ ಕೆಲವು ವ್ಯಾಜ್ಯಗಳ ಎಲ್ಲೆಗಳನ್ನು ನಿರಾಕರಿಸುವುದು ಅವಶ್ಯಕವಾಗಿರುತ್ತದೆಂದು ಭಾವಿಸುತ್ತದೆ.

11. ಪ್ರತ್ಯರ್ಜಿದಾರನು, ರಿಟ್ ಅರ್ಜಿಸಂಖ್ಯೆ: 11236-237/2012 ನ್ನು ಹಾಗೂ ರಿಟ್ ಅಪೀಲುಸಂಖ್ಯೆ: 537-538/2013 ನ್ನು ಸಲ್ಲಿಸಿರುತ್ತಾನೆ.ಸದರಿ ರಿಟ್ ಅರ್ಜಿ ಹಾಗೂ ರಿಟ್ ಅಪೀಲುಗಳು ನಡೆಸಲಾದ ವಿಚಾರಣೆ ನ್ಯಾಯಯುತವಾದುದು ಹಾಗೂ ಯುಕ್ತವಾದುದು ಆಗಿದೆಯೇ ಎಂಬ ಪೂರ್ವಬಾವಿ ವಿವಾದ ಸಂಬಂಧದಲ್ಲಿ ಕಾರ್ಮಿಕ ನ್ಯಾಯಾಲಯವು ನೀಡಿದ ನಿರ್ಣಯಕ್ಕೆ ಸಂಬಂಧಿಸಿರುತ್ತವೆ.ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ರಿಟ್ ಅರ್ಜಿಯನ್ನು ತಿರಸ್ಕರಿಸಲು ಸಮ್ಮತಿಸಿರುತ್ತಾರೆ.ಆದರೆ ಹೊರಡಿಸಿದ ಆದೇಶದ ಸ್ವರೂಪವನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ವಿಭಾಗೀಯ ಪೀಠವು, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

7. ಮೇಲಿನ ವಾಸ್ತವಾಂಶಗಳಲ್ಲಿ, ಕಾರ್ಮಿಕ ನ್ಯಾಯಾಲಯದ ಮುಂದೆ ಪ್ರತ್ಯರ್ಜಿದಾರನ ಅರ್ಜಿಯನ್ನು ವಿರೋಧಿಸುವುದಕ್ಕೆ ಸಂಬಂಧಿಸಿದಂತೆ ಅರ್ಜಿದಾರನಿಗೆ ಲಭ್ಯವಾದ ಎಲ್ಲಾ ಕಾನೂನು ವಾದಗಳು ಹಾಗೂ ವಿವಾದಗಳನ್ನು ಕಾರ್ಮಿಕ ನ್ಯಾಯಾಲಯವು ಮುಕ್ತವಾಗಿರುತ್ತದೆ ಹಾಗೂ ಮಾನ್ಯ ಏಕಸದಸ್ಯ ನ್ಯಾಯಪೀಠದ ಮುಂದಿರುವ ಪ್ರಶ್ನಿತ ಆದೇಶದ ಮೂಲಕ ತೀರ್ಮಾನಕ್ಕೆ ಬರಬೇಕಾದ ಒಂದೇ ಅಂಶವೆಂದರೆ ಈತನ ವಿರುದ್ಧ ನಡೆದ ಆಂತರಿಕ ವಿಚಾರಣೆಯು ನ್ಯಾಯಯುತವೂ ಹಾಗೂ ಸರಿಯಾದುದು ಆಗಿದೆಯೇ ಎಂಬುದಾಗಿರುತ್ತದೆ.

ಆದ್ದರಿಂದ ಈ ಅಭಿ ಪ್ರಾಯಗಳೊಂದಿಗೆ ಅಪೀಲುಗಳನ್ನು ವಜಾಗೊಳಿಸಲಾಗಿರುತ್ತದೆ.(ಇದಕ್ಕೆ ಈ ನ್ಯಾಯಾಲಯವು ಒತ್ತು ನೀಡಿರುತ್ತದೆ)

12. ಅದರೊಂದಿಗೆ ಪ್ರತ್ಯರ್ಜಿದಾರನು ರಿಟ್ ಅಪೀಲುಸಂಖ್ಯೆ: 30/2015 ರಲ್ಲಿ ಪುನರವಲೋಕನ ಅರ್ಜಿಯನ್ನು ಸಲ್ಲಿಸಿರುತ್ತಾನೆ ಹಾಗೂ ಆರ್.ಪಿ.ಸಂಖ್ಯೆ:375/2016 ನ್ನು ಹೊಂದಿರುವ ಸದರಿ ಪುನರವಲೋಕನ ಅರ್ಜಿಯನ್ನು 02.09.2016 ರಂದಿನ ಆದೇಶದ ಮೂಲಕ ತಿರಸ್ಕರಿಸಲಾಗಿರುತ್ತದೆ.ರಿಟ್ ಅರ್ಜಿಸಂಖ್ಯೆ: 25706/2002 ಹಾಗೂ 7732-34/2005 ರಲ್ಲಿ ಹೊರಡಿಸಿದ ಆದೇಶದಿಂದ ಉದ್ಭವಿಸಿದ ರಿಟ್ ಅಪೀಲು ಸಂಖ್ಯೆ 2363/2005 ರಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಈ ಮುಂದಿನಂತೆ ಆದೇಶಿಸಲು ಕೋರಲಾಗಿರುತ್ತದೆಂಬುದನ್ನು ಗಮನಿಸಿಕೊಳ್ಳುವುದು ಸೂಕ್ತವಾದುದಾಗಿರುತ್ತದೆ.

“ಪಕ್ಷಕಾರರ ನಡುವಿನ ಒಪ್ಪಂದದ ಹಿನ್ನೆಲೆಯಲ್ಲಿ ನಾವು ಅಪೀಲುದಾರನ ವಿರುದ್ಧ ಮಾಡಲಾದ ಎಲ್ಲಾ ಆಪಾದನೆಗಳ ಸಮಗ್ರ ಆರೋಪ ಪಟ್ಟಿಯನ್ನು ನಿಗಮವು ನೀಡಬೇಕೆಂದು ಹಾಗೂ ಅದಕ್ಕೆ ಈತನ ವಿವರಣೆಯು ಮನವರಿಕೆಯಾಗದಿದ್ದಲ್ಲಿ, ನಿಗಮವು, ನಿರ್ವಹಿಸುತ್ತಿರುವ ಪ್ಯಾನೆಲ್ನಿಂದ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿ, ಅವರು ಅಂಥ ಆರೋಪಗಳನ್ನು ವಿಚಾರಣೆ ನಡೆಸಿ, ಇದರಲ್ಲಿ ಯಾವುದಾದರೂ ಕಾನೂನಿಗನುಸಾರವಾಗಿ ಇದ್ದಲ್ಲಿ, ಕ್ರಮಕೈಗೊಳ್ಳಲು ನಿಗಮವು ಮುಂದುವರೆಯತಕ್ಕಂಥ ಆಧಾರದ ಮೇಲೆ ಮೂರು ತಿಂಗಳೊಳಗೆ ವರದಿಯನ್ನು ಸಲ್ಲಿಸಬೇಕೆಂದು ನಿರ್ದೇಶಿಸಿರುತ್ತೇವೆ.

( ಈ ನ್ಯಾಯಾಲಯವು ಇದಕ್ಕೆ ಒತ್ತು ನೀಡಿದೆ)

13. ಇಲ್ಲಿನ ಅರ್ಜಿದಾರರ ವಿರುದ್ಧ ಪೂರ್ವಾಗ್ರಹ ಪೀಡಿತರಾಗಿ ಈ ನ್ಯಾಯಾಲಯದ ಸನ್ಮಾನ್ಯ ವಿಭಾಗೀಯ ಪೀಠವು ಮೇಲಿನ ನಿರ್ಣಯವನ್ನು ನೀಡಿರುತ್ತದೆಂದು ಕಂಡು ಬಂದಿರುತ್ತದೆ.ಅಲ್ಲದೆ, ರಿಟ್ ಅರ್ಜಿಸಂಖ್ಯೆ: 29861/2009 ರಲ್ಲಿ ಹೊರಡಿಸಿದ 13.10.2009 ದಿನಾಂಕದ ಆದೇಶದಿಂದ ಉದ್ಭವಿಸಿದ್ದು, ರಿಟ್ ಅಪೀಲುಸಂಖ್ಯೆ: 3766/2009 ಆಗಿರುತ್ತದೆ.ಸದರಿ ರಿಟ್ ಅರ್ಜಿಯನ್ನು, 29.07.2009 ನೇ ದಿನಾಂಕದ ದೂರಿನ ಕಾರಣದ ಮೇಲೆ ಅಮಾನತಿನಡಿಯಲ್ಲಿ ಇಲ್ಲಿನ ಪ್ರತ್ಯರ್ಜಿದಾರರು ಮಂಡಿಸಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿರುತ್ತದೆ.ರಿಟ್ ಅಪೀಲನ್ನು ವಿಲೆ ಮಾಡುವಾಗ ಈ ನ್ಯಾಯಾಲಯದ ವಿಭಾಗೀಯ ಪೀಠವು ಈ ಮುಂದಿನ ಅಭಿಪ್ರಾಯವನ್ನು ಮಂಡಿಸಿರುತ್ತದೆ:

“7. ಪ್ರತ್ಯರ್ಜಿದಾರ-ನಿಗಮದ ಪರ ಮಾನ್ಯ ನ್ಯಾಯವಾದಿಗಳ ಮೇಲಿನ ನಿವೇದನೆಯ ಹಿನ್ನಲೆಯಲ್ಲಿ ಈ ನ್ಯಾಯಾಲಯಕ್ಕೆ ಇದು ನ್ಯಾಯಯುತವೂ ಹಾಗೂ ಸರಿಯಾದುದು ಆಗಿರುತ್ತದೆ.ಅನುಬಂಧ ಜೆ ಮೇರೆಗಿನ ಫಿರ್ಯಾದಿನಲ್ಲಿ ರೂಪಿಸಿದ ಆಪಾದನೆಗಳಿಗೆ ಸಂಬಂಧಿಸಿದಂತೆ, ಕೆಲವು ಸಾಕ್ಷಿದಾರರು ಫಿರ್ಯಾದಿನಲ್ಲಿ ಸಹಿ ಮಾಡಿರುವುದಿಲ್ಲ.ಅಲ್ಲದೆ ಅವರಲ್ಲಿ ಇಬ್ಬರು, ಅಂಥ ಆಪಾದಿತ ಘಟನೆ ನಡೆದಿಲ್ಲವೆಂದು ಉಪಮುಖ್ಯ ಭದ್ರತಾಧಿಕಾರಿಗಳ ಎದುರು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.ಈ ಸಂದರ್ಭಗಳಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಇಂದೇ ಒಂದು ಮನವಿ ನೀಡಲು ಅಪೀಲುದಾರರಿಗೆ ಅನುಮತಿ ನೀಡುವುದು ನಮಗೆ ನ್ಯಾಯಯುತವೂ ಹಾಗೂ ಸರಿಯಾದ ಕ್ರಮವು ಆಗಿರುತ್ತದೆ.ಇದನ್ನು ಪರಿಗಣಿಸಿ, ವಿಚಾರಣೆ ಇತ್ಯರ್ಥದಲ್ಲಿರುವ ಅಮಾನತು ಆದೇಶವನ್ನು ರದ್ದುಪಡಿಸುವ ಮೂಲಕ ಸೂಕ್ತ ಆದೇಶಗಳನ್ನು ಹೊರಡಿಸಬೇಕಾಗಿರುತ್ತದೆ.ಅಲ್ಲದೆ ಶಿಸ್ತುಪ್ರಾಧಿಕಾರಕ್ಕೆ ತ್ವರಿತವಾಗಿ ವಿಚಾರಣಾ ಕಾರ್ಯವಿಧಾನವನ್ನು ವಿಲೆ ಮಾಡಲು ನಿರ್ದೇಶಿಸಿ, ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾ ೦ ಕದಿ ೦ ದ ಮೂರು ತಿಂಗಳುಗಳ ಒಳಗೆ ಇದನ್ನು ಮುಕ್ತಾಯಗೊಳಿಸುವುದು.23.01.2010 ರಂದು ವಿಚಾರಣೆಯ ದಿನಾಂಕವು ನಿಗದಿಯಾಗಿರುತ್ತದೆ.ಅರ್ಜಿದಾರನು ಖುದ್ದಾಗಿ ಇದರಲ್ಲಿ ಭಾಗವಹಿಸತಕ್ಕದ್ದು.ವಿಚಾರಣೆ ಮುಕ್ತಾಯವಾಗುವವರೆಗೆ, ಅಪೀಲುದಾರನ ಸೇವಾ ಷರತ್ತುಗಳು ಬಾಧಕಗೊಳ್ಳತಕ್ಕದ್ದಲ್ಲ ". (ಈ ನ್ಯಾಯಾಲಯವು ಇದಕ್ಕೆ ಒತ್ತು ನೀಡಿರುತ್ತದೆ)

14. ಇಲ್ಲಿನ ಪ್ರತ್ಯರ್ಜಿದಾರರು, ರಿಟ್ ಅಪೀಲುಸಂಖ್ಯೆ: 537-538/2013 ರಲ್ಲಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ವಿಶೇಷ ರಜಾ ಅರ್ಜಿಯನ್ನು ಸಲ್ಲಿಸಿರುತ್ತಾರೆಂಬುದನ್ನು ಹಾಗೂ ವಿಶೇಷ ರಜಾ ಅರ್ಜಿ ಅಪೀಲು (ಸಿವಿಲ್)ಸಂಖ್ಯೆ: (ಎಸ್) 34485-34486/2013 ರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಒಂದು ನೋಟೀಸನ್ನು

ಆದೇಶಿರುತ್ತದೆ.ಆದರೆ ಆ ತರುವಾಯ ಅಂತಿಮ ಐತೀರ್ಪನ್ನು ಹೊರಡಿಸಿದ ಮೇಲೆ ವಿಶೇಷ ರಜಾ ಅರ್ಜಿಯನ್ನು ನಿರರ್ಥಕವೆಂದು ವಜಾಗೊಂಡಿರುತ್ತದೆಂಬುದನ್ನು ಗಮನಿಸಿಕೊಳ್ಳಬೇಕಾದುದು ಸೂಕ್ತವಾಗಿರುತ್ತದೆ.

15. ಈ ಪ್ರಕರಣದ ವಿಲಕ್ಷಣತೆಯ ಹಿನ್ನೆಲೆಯಲ್ಲಿ ಈ ನ್ಯಾಯಾಲಯವು, ಕೈಗಾರಿಕಾ ವಿವಾದಗಳ (ಕರ್ನಾಟಕ) ನಿಯಮಗಳು, 1957 ರ 61 ( 2) ನೇ ನಿಯಮದೊಂದಿಗೆ ಓದಲಾದ ಕೈಗಾರಿಕಾ ವಿವಾದಗಳ ಅಧಿನಿಯಮದ 33 ( 2) (ಬಿ) ಪ್ರಕರಣದಡಿಯಲ್ಲಿ ಅರ್ಜಿದಾರರು ಸಲ್ಲಿಸಿದ ಸರಣಿ ಅರ್ಜಿ ಸಂ .1/2010 ತಿರಸ್ಕರಿಸಲು ಎರಡನೇ ಸುತ್ತಿನಲ್ಲಿ ಕಾರ್ಮಿಕ ನ್ಯಾಯಾಲಯವು ಸಲ್ಲಿಸಿದ ಕಾರಣಗಳನ್ನು ವಿವರಣಾತ್ಮಕವಾಗಿ ಪರಿಶೀಲಿಸಿರುತ್ತದೆ.ಈ ಸಂಬಂಧದಲ್ಲಿ ಕಾರ್ಮಿಕ ನ್ಯಾಯಾಲಯವು ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ವಿವರವಾಗಿ ಪರಿಶೀಲಿಸಲು ಆರಂಭಿಸಿ, ಸೇವೆಯಿಂದ ಪ್ರತ್ಯರ್ಜಿದಾರನನ್ನು ವಜಾಗೊಳಿಸುವ ಕ್ರಮಕ್ಕೆ ಸಂಬಂಧಿಸಿದಂತೆ ಅನುಮೋದನೆ ಕೋರಿ ಕೈಗಾರಿಕಾ ವಿವಾದಗಳ ಅಧಿನಿಯಮದ 33 ( 2) (ಬಿ) ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತದೆಂಬುದನ್ನು ಗಮನಿಸಿಕೊಳ್ಳುವುದು ಸಮುಚಿತವಾಗಿರುತ್ತದೆ.ಕಾರ್ಮಿಕ ನ್ಯಾಯಾಲಯವು 05.10.1987 ರ ವಜಾದೇಶವನ್ನು ರದ್ದುಪಡಿಸಿದ ವಾಸ್ತವಾಂಶ ತರುವಾಯ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮರು ಸ್ಥಾಪಿಸಿದ್ದು, ಪ್ರತ್ಯರ್ಜಿದಾರನ ಅಮಾನತ್ತಿನ ಚ ವಾಸ್ತವಾಂಶ ಹಾಗೂ ಈತನನ್ನು ಆರೋಪದಿಂದ ಮುಕ್ತಗೊಳಿಸಿದ ಜಿಲ್ಲಾ ನ್ಯಾಯಾಧೀಶರ ವರದಿ ಹಾಗೂ ವರದಿಯನ್ನು ತಿರಸ್ಕರಿಸಿ, ಸೇವೆಯಿಂದ ವಜಾ ಮಾಡುವ ಆದೇಶವನ್ನು ಹೊರಡಿಸುವುದನ್ನು ಆಯ್ಕೆ ಮಾಡಿಕೊಂಡು ಶಿಸ್ತು ಪ್ರಾಧಿಕಾರದ ಕ್ರಮಗಳನ್ನು ಪರಿಗಣಿಸಬೇಕಾಗಿರುತ್ತದೆ.

16. ಪ್ರತ್ಯರ್ಜಿದಾರರು, ವಜಾ ಆದೇಶವನ್ನು ಪ್ರಶ್ನಿಸುವುದಕ್ಕೆ ಬದಲು, ವ್ಯವಸ್ಥಾಪನಾ ನಿರ್ದೇಶಕರ ವಿರುದ್ಧ ದೂರನ್ನು ನೀಡಲು ಮುಂದುವರೆದಿದ್ದು, ಆ ತರುವಾಯ ಪ್ರತ್ಯರ್ಜಿದಾರರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡಿರುತ್ತಾರೆಂಬ ವಾಸ್ತವಾಂಶವನ್ನು ಪರಿಗಣಿಸಲಾಗಿರುತ್ತದೆ.ಆಡಳಿತ ಮಂಡಳಿಯು ಅಮಾನತ್ತಿನ ಅವಧಿಗೆ ಸಂಬಂಧಿಸಿದಂತೆ ಹಿಂದಿರುಗಿಸಬೇಕಾದ ವೇತನವನ್ನು ಹಿಂದಿರುಗಿಸುವುದನ್ನು ತಪ್ಪಿಸುವಂಥ ಅಲ್ಪ ಪ್ರಮಾಣದ ದಂಡನೆಯನ್ನು ವಿಧಿಸಿದ್ದು, ಇದನ್ನು ಪ್ರತ್ಯರ್ಜಿದಾರರು ರಿಟ್ ಅರ್ಜಿಸಂಖ್ಯೆ: 25706/2002 ರಲ್ಲಿ ಪ್ರಶ್ನಿಸಿರುತ್ತಾರೆ.ಇದರ ವಿಚಾರಣೆ ನಡೆಸಿದ ನ್ಯಾಯಾಲಯವು ಶಿಸ್ತು ಪ್ರಾಧಿಕಾರದ ವಿರುದ್ಧ ವಿಚಾರಣೆಗೆ ನಿರ್ದೇಶಿಸಿರುತ್ತದೆ.ಮೇಲೆ ಹೇಳಿದ ರಿಟ್ ಅರ್ಜಿಯಲ್ಲಿ ಈ ನ್ಯಾಯಾಲಯದ ಆದೇಶಗಳನ್ನು ಅನುಸರಿಸಿ, ವಿಚಾರಣೆಯನ್ನು ನಡೆಸಲಾಗಿರುತ್ತದೆ ಹಾಗೂ ಶಿಸ್ತು ಪ್ರಾಧಿಕಾರವು ಎಂಟು ಆರೋಪಗಳ ದೋಷಾರೋಪವನ್ನು ಹೊತ್ತಿರುತ್ತದೆ.ಈತನ ವಿರುದ್ಧ ಕ್ರಮ ಜರುಗಿಸಿದ್ದು, ತರುವಾಯ ಶಿಸ್ತುಪ್ರಾಧಿಕಾರದ ಮೇಲೆ ದಂಡನೆಯನ್ನು ವಿಧಿಸಲಾಗುತ್ತದೆಂದು ಈ ನ್ಯಾಯಾಲಯಕ್ಕೆ ಭರವಸೆ ನೀಡಲಾಗಿರುತ್ತದೆ.

17. ಅಲ್ಲದೆ, ಶಿಸ್ತು ಪ್ರಾಧಿಕಾರದ ವಿರುದ್ಧದ ದೂರಿನ ವಾಸ್ತವಾಂಶವನ್ನು ಹಾಗೂ ಶಿಸ್ತು ಪ್ರಾಧಿಕಾರವು ಆಪಾದಿತ ಕಂಡಕ್ಟರ್‌ನಿಂದ 10,000/- ರೂ.ಗಳ ಲಂಚವನ್ನು ಪಡೆಯುತ್ತಿರುವಾಗ ಲೋಕಾಯುಕ್ತ ಪೊಲೀಸರು ಪುರಾವೆ ಸಮೇತ ಹಿಡಿದಿರುತ್ತಾರೆಂಬುದನ್ನು ಸಹ ಪರಿಗಣಿಸಲಾಗಿರುತ್ತದೆ.ಆ ತರುವಾಯ ಮೇಲೆ ಹೇಳಿದ ರಿಟ್ ಅರ್ಜಿಯನ್ನು ಪರ್ಯಾಯ ಪರಿಹಾರವು ದೊರೆಯುವ ಆಧಾರದ ಮೇಲೆ ವಜಾಗೊಳಿಸಬೇಕಾಗಿರುತ್ತದೆ.ಅರ್ಜಿದಾರರು ಆಕ್ಷೇಪಣೆಗಳಲ್ಲಿ ಒಂಭತ್ತು ಆರೋಪಗಳನ್ನು ಆಪಾದಿಸಿದ್ದಾಗ್ಯೂ, ಹಲವಾರು ವರ್ಷಗಳು ಕಳೆದರೂ ಯಾವುದೇ ವಿಚಾರಣೆ ನಡೆಸಿರುವುದಿಲ್ಲ.ಪ್ರತ್ಯರ್ಜಿದಾರರು, ನಿರ್ದಿಷ್ಟ ಸಮಯದೊಳಗೆ ವಿಚಾರಣೆಯನ್ನು ಪೂರ್ಣಗೊಳಿಸುವ ನಿರ್ದೇಶನದೊಂದಿಗೆ ವಿಲೆ ಮಾಡಬೇಕಾದಂಥ ರಿಟ್ ಅರ್ಜಿ ಸಂಖ್ಯೆ .3766/2009 ರಲ್ಲಿನ ಆದೇಶವನ್ನು ಪ್ರಶ್ನಿಸಿರುತ್ತಾರೆ.ಅಂಥ ನಿರ್ದೇಶನವಿದ್ದಾಗ್ಯೂ, ಯಾವುದೇ ವಿಚಾರಣೆಯನ್ನು ಪ್ರತ್ಯರ್ಜಿದಾರರ ವಿರುದ್ಧ ನಡೆಸಲಾಗಿರುವುದಿಲ್ಲ.

18. ದೂರು ಸಂಖ್ಯೆ 377/2009 ಹಾಗೂ 299/2010 ರಲ್ಲಿ ಶಿಸ್ತು ಪ್ರಾಧಿಕಾರ ಹಾಗೂ ವ್ಯವಸ್ಥಾಪನಾ ನಿರ್ದೇಶಕರ ವಿರುದ್ಧ ಪ್ರತ್ಯರ್ಜಿದಾರರು ದೂರುಗಳನ್ನು ಸಲ್ಲಿಸಿರುತ್ತಾರೆಂಬ ವಾಸ್ತವಾಂಶವನ್ನು ಸಹ ಪರಿಗಣಿಸಲಾಗಿರುತ್ತದೆ.ಈತ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಸಂಯುಕ್ತ ಕಾರ್ಮಿಕರ ಪರವಾಗಿ 523 ವಿವಾದಗಳಲ್ಲಿ ಮಧ್ಯೆ ಪ್ರವೇಶಿಸಿದ್ದು, ಬಹುತೇಕ ವಿವಾದಗಳಲ್ಲಿ ಉದ್ಯೋಗಿಗಳನ್ನು ಪುನ:ಕೆಲಸಕ್ಕೆ ಸೇರಿಸಿಕೊಳ್ಳಲಾಗಿರುತ್ತದೆಂಬ ವಾಸ್ತವಾಂಶವನ್ನು ಸಹ ಪರಿಗಣಿಸಲಾಗಿರುತ್ತದೆ.

19. ಅಲ್ಲದೆ, ಮೂರನೇ ಪಕ್ಷಕಾರರಾದ ಕಾರ್ಮಿಕರು ಶಿಸ್ತುಪ್ರಾಧಿಕಾರದ ವಿರುದ್ಧ ಕ್ರಿಮಿನಲ್ ದೂರನ್ನು ಸಲ್ಲಿಸಿದ್ದು, ಸದರಿ ಅಧಿಕಾರಿಯು, ಈ ದೂರನ್ನು ಪ್ರತ್ಯರ್ಜಿದಾರನ ದುಪ್ರೇರಣೆಯಿಂದ ನೀಡಲಾಗಿದೆಯೆಂದು

ಭಾವಿಸಿ, ಪ್ರತ್ಯರ್ಜಿದಾರನ ವಿರುದ್ಧ ಸೇಡನ್ನು ತೀರಿಸಿಕೊಳ್ಳಲು ನಡೆಸಿರುವ ಕ್ರಮವೆಂದೂ ಆಪಾದಿಸಲಾಗಿರುತ್ತದೆ.ಅಲ್ಲದೆ, 150 ರಿಂದ 200 ದಿನಗಳಿಗೂ ಮೀರಿದ ಅವಧಿಯ ಅನಧಿಕೃತ ಗೈರು ಹಾಜರಿಯನ್ನು ಒಳಗೊಂಡ ಪ್ರಕರಣಗಳಲ್ಲಿ, ಶಿಸ್ತು ಪ್ರಾಧಿಕಾರವು ಸದರಿ ಗೈರು ಹಾಜರಿಯನ್ನು ಖಂಡಿಸಿ, ಅವರುಗಳ ಸೇವೆಯಲ್ಲಿ ಮುಂದುವರೆಯುವ ಅವಕಾಶ ಕಲ್ಪಿಸಿದ್ದು, ಪ್ರತ್ಯರ್ಜಿದಾರನಿಗೆ ಮೇಲೆ ಹೇಳಿದ ಕಾರಣಗಳಿಗೆ ಬಲಿಪಶುವಾಗುವಂತೆ ನಡೆಸಿಕೊಂಡಿದ್ದಾರೆಂಬ ಪ್ರತ್ಯರ್ಜಿದಾರನ ವಾದಪತ್ರವನ್ನು ಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ.ಅಲ್ಲದೆ, ದಿನಾಂಕ 18.05.2005 ರ ತರುವಾಯ 11 ದಿನಗಳ ರಜೆಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆಂಬುದನ್ನು ಸಹ ಪರಿಗಣಿಸಲಾಗಿರುತ್ತದೆ.ಅಲ್ಲದೆ, ಕರ್ತವ್ಯದ ಕರೆ-ನೋಟೀಸನ್ನು ಸ್ವೀಕರಿಸಿದ ಮೇಲೆ ಪ್ರತ್ಯರ್ಜಿದಾರನು ಕರ್ತವ್ಯವನ್ನು ವರದಿ ಮಾಡಿಕೊಂಡಿರುತ್ತಾನೆಂದೂ ಸಹ ಪರಿಗಣಿಸಲಾಗಿರುತ್ತದೆ.ಅಲ್ಲದೆ ಬೆಂಗಳೂರು ಗ್ರಾಮೀಣ ವಿಭಾಗಕ್ಕೆ ಬದಲಾಗಿ ಬೆಂಗಳೂರಿನ ಪ್ರಧಾನ ವಿಭಾಗದಿಂದ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿರುವ ಕ್ರಮದ ವಾದವನ್ನು ಸಹ ಪರಿಗಣಿಸಲಾಗಿರುತ್ತದೆ.ಮುಂದುವರೆದು, ವಿಭಾಗೀಯ ಪೀಠದ ಆದೇಶವಿದ್ದಾಗ್ಯೂ ಭ್ರಷ್ಟಾಚಾರ ವಿರುದ್ಧದ ತಮ್ಮ ಹೋರಾಟಕ್ಕೆ ಪ್ರತ್ಯರ್ಜಿದಾರನನ್ನು ಬಲಿಪಶು ಮಾಡುವುದಕ್ಕಾಗಿಯೇ ಉದ್ದೇಶಪೂರ್ವಕವಾಗಿ ಯಾವುದೇ ವಿಚಾರಣೆಯನ್ನು ನಡೆಸಿರುವುದಿಲ್ಲ. ಕಾರ್ಮಿಕ ನ್ಯಾಯಾಲಯವು ತನ್ನ ಮುಂದಿರುವ ವಾದಗಳನ್ನು ಕುರಿತಂತೆ, ಪರಿಗಣನೆಗಾಗಿ ನಾಲ್ಕು ವಿವಾದಾಂಶಗಳನ್ನು ರೂಪಿಸಿದ್ದು, ಅವು ಈ ಮುಂದಿನಂತಿರುತ್ತವೆ:

1. ಮೊದಲ ಪಕ್ಷಕಾರರ ವಿರುದ್ಧ ನಡೆಸಿದ ಇಲಾಖಾ ಮಟ್ಟದ ವಿಚಾರಣೆಯು ನ್ಯಾಯಯುತವಾಗಿದೆ ಹಾಗೂ ಯುಕ್ತವಾಗಿದೆಯೆ?

2. ಆರೋಪಗಳನ್ನು ರುಜುವಾತು ಪಡಿಸಲಾಗಿದೆಯೆಂಬ ಅಭಿಪ್ರಾಯವನ್ನು ವಿಚಾರಣಾಧಿಕಾರಿಯು ನೀಡಿರುವುದು ಸಮರ್ಥನೀಯವಾಗಿದೆಯೆ?

3. ಮೊದಲ ಪಕ್ಷಕಾರರನ್ನು ಶಿಸ್ತು ಪ್ರಾಧಿಕಾರವು ವಜಾ ಗೊಳಿಸಿರುವುದು ನ್ಯಾಯಸಮ್ಮತವಾಗಿದೆಯೆ?

4. ಪಕ್ಷಕಾರರು ಯಾವ ಐತೀರ್ಪು ಅಥವಾ ಆದೇಶಕ್ಕೆ ಹಕ್ಕುಳ್ಳವರಾಗಿರುತ್ತಾರೆ?

20. ವಿವಾದಾಂಶ ಸಂ.2 ಹಾಗೂ 3 ಈ ರಿಟ್ ಅರ್ಜಿಯ ಉದ್ದೇಶಕ್ಕೆ ಸಮುಚಿತವಾಗಿರುತ್ತವೆ.ಕಾರ್ಮಿಕ ನ್ಯಾಯಾಲಯವು ಅರ್ಜಿದಾರ/ಅಪೀಲುದಾರನು ಉದಾಹರಿಸಿದ ಸಮುಚಿತ ನಿರ್ಣಯಗಳನ್ನು ಪರಿಗಣಿಸಿರುತ್ತದೆ.ಸಂಬಂಧಪಟ್ಟ ವಾದಗಳು ಹಾಗೂ ದಾಖಲೆ ಮೇಲಿನ ವಿಷಯ ಅಂದರೆ ಅರ್ಜಿದಾರರ ಪರವಾದ ಹಾಗೂ ಎಡಬ್ಲ್ಯೂ ೧1 ಹಾಗೂ ಎಡಬ್ಲ್ಯೂ 2 2 ಸಾಕ್ಷ್ಯಗಳ ನಿಶಾನೆ ಎ 1 ರಿಂದ ಎ 34 ರ ನಿಶಾನೆಗಳ ವಿವರವಾದ ಪರಿಶೀಲನೆಯ ತರುವಾಯ ಹಾಗೂ ಆರ್.ಡಬ್ಲ್ಯೂ 1 ರಂತೆ ಪ್ರತ್ಯರ್ಜಿದಾರರ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ಹಾಗೂ ನಿಶಾನೆಗಳನ್ನು ಪ್ರತ್ಯರ್ಜಿದಾರರ ಪರವಾಗಿ ನಿಶಾನೆ ಆರ್ .1 ರಿಂದ ಆರ್ .104 ಎಂದು ಗುರುತು ಮಾಡಿದ ತರುವಾಯ ವಿವಾದಾಂಶ ಸಂ.2 ಹಾಗೂ 3 ರ ಸಂಬಂಧದಲ್ಲಿ ನಕಾರಾತ್ಮಕವಾಗಿ ನಿರ್ಣಯ ನೀಡಿದೆ.ಆ ಮೂಲಕ ವಿಚಾರಣಾಧಿಕಾರಿಗಳು, ಆರೋಪಗಳನ್ನು ರುಜುವಾತುಪಡಿಸಲಾಗಿದೆಯೆಂಬುದು ನ್ಯಾಯಸಮ್ಮತ ವಾಗಿರುವುದಿಲ್ಲ ಅಲ್ಲದೆ ಶಿಸ್ತು ಪ್ರಾಧಿಕಾರವು ಸೇವೆಯಿಂದ ವಜಾ ಮಾಡಿ ನೀಡಿರುವ ದಂಡನೆಯು ನ್ಯಾಯಸಮ್ಮತವಾಗಿರುವುದಿಲ್ಲವೆಂದು ತೀರ್ಮಾನಿಸಲಾಗಿರುತ್ತದೆ.ನ್ಯಾಯಾಧಿಕರಣವು, ರಿಟ್ ಅಪೀಲುಸಂಖ್ಯೆ: 30/2015 ರಲ್ಲಿನ ಆದೇಶದ ನಿಬಂಧನೆಗಳನ್ನು ಮನದಲ್ಲಿಟ್ಟುಕೊಂಡು ಹಾಗೂ ಮಾರ್ಟಿನ್ ಬರ್ನ್ ಅಮಿಟೆಡ್ -ವಿರುದ್ಧ- ಆರ್.ಎನ್.ಬ್ಯಾನರ್ಜಿಯವರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ ನಿರ್ಣಯವನ್ನು ನೀಡಿರುತ್ತದೆ.ಕಾರ್ಮಿಕ ನ್ಯಾಯಾಲಯವು ಮೇಲೆ 22 ನೇ ಪ್ಯಾರಾಗೆ ನಿರ್ದಿಷ್ಟವಾಗಿ ದೃಢಕ್ತಿಯನ್ನು ನೀಡಿರುತ್ತದೆ.23 ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

"23. ಮೇಲೆ ಉಲ್ಲೇಖಿಸಿದ ನಿರ್ದಿಷ್ಟ ಅಭಿಪ್ರಾಯಗಳು ಹಾಗೂ ನಿರ್ದೇಶನಗಳ ಹಿನ್ನೆಲೆಯಲ್ಲಿ ಈ ನ್ಯಾಯಾಲಯವು, ನಿರ್ಬಂಧಿತ ಪುನರ್ ವಿಚಾರಣಾ ಆದೇಶವನ್ನು ಹೊರತುಪಡಿಸಿದ ಸಂಬಂಧಪಡದ ವಿವಾದಾಂಶಗಳನ್ನು ನಿರ್ಧರಿಸುವಂತಿಲ್ಲವೆಂಬ ಪರಿಗಣಿತ ಅಭಿಪ್ರಾಯವು ನನ್ನದಾಗಿದೆ.ಮೊದಲನೆಯದಾಗಿ,

ಈ ನ್ಯಾಯಾಲಯವು 1958 ರ ಸರ್ವೋಚ್ಚ ನ್ಯಾಯಾಲಯ 79 ರಲ್ಲಿ ಚ ವರದಿಯಾದ ಮಾರ್ಟಿನ್ ಬರ್ನ್ ಲಿ. ವಿರುದ್ಧ ಆರ್.ಎನ್. ಬ್ಯಾನರ್ಜಿ ಪ್ರಕರಣದಲ್ಲಿ ವರದಿಯಾದ ನಿರ್ಣಯದಲ್ಲಿ ವಿಧಿಸಿದ ತತ್ವಗಳನ್ನು ಪರಿಗಣಿಸಬೇಕಾಗಿರುತ್ತದೆ.ಸದರಿ ತೀರ್ಪಿನ 28 ನೇ ಪ್ಯಾರಾವನ್ನು ಓದಿನ ಪರಾಮರ್ಶನಕ್ಕಾಗಿ ಈ ಮುಂದೆ ಉದ್ಧರಿಸಲಾಗಿರುತ್ತದೆ:

"28. ಕಾರ್ಮಿಕ ಅಪೀಲು ನ್ಯಾಯಾಧಿಕರಣವು, ಈ ಅಂಶಗಳ ಮೇಲೆ, ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಪ್ರತ್ಯರ್ಜಿದಾರರನ್ನು ಸೇವೆಯಿಂದ ವಜಾಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಪೀಲುದಾರನು ರೂಪಿಸಿರುತ್ತಾನೆಯೇ ಎಂಬುದನ್ನು ನಿರ್ಧರಿಸಬೇಕಾಗಿರುತ್ತದೆ. ಮೊದಲ ನೋಟಕ್ಕೆ ಸಮ್ಮತವಾದ ವಾದವೆಂದರೆ ವಾದವನ್ನು ಸಮರ್ಥವಾಗಿ ರುಜುವಾತುಪಡಿಸುವುದು ಮಾತ್ರವಾಗಿರದೆ, ವಾದವು, ಅದನ್ನು ನಂಬುವುದಕ್ಕೆ ಪೂರಕವಾಗಿರುವ ಕಡೆ ಕರೆ ದೊಯ್ಯುವ ೦ ಥ ಸಾಕ್ಷ್ಯವಾಗಿದ್ದಲ್ಲಿ ಅದನ್ನು ಸುಸ್ಥಾಪಿಸಬೇಕಾದುದು ಎಂದು ಹೇಳಬೇಕಾಗುತ್ತದೆ.ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಸೂಕ್ತವಾಗಿ ಪರಿಗಣಿಸುವ ಹಾಗೆ ರೂಪಿಸಲಾಗಿದೆಯೇ ಎಂಬುದನ್ನು ನಿರ್ಧರಿಸುವಾಗ, ಇದು ಪ್ರಶ್ನಿತ ನಿರ್ಧಾರಕ್ಕೆ ಬರಲು ಸಾಧ್ಯವಾಗುವಂಥ ಸಾಕ್ಷ್ಯವೇ ಹಾಗೂ ಆ ಸಾಕ್ಷ್ಯದ ಮೇಲೆ ಇದೊಂದೇ ತೀರ್ಮಾನಕ್ಕೆ ಬರಲು ಸಾಧ್ಯವಾಗಿರುವುದಿಲ್ಲವೆಂದೂ ತೀರ್ಮಾನಿಸಬೇಕಾಗುತ್ತದೆ.ಈ ಪ್ರಶ್ನೆಯನ್ನು ಪರಿಗಣಿಸುವ ನ್ಯಾಯಾಧಿಕರಣವು ಸ್ವತಃ ಭಿನ್ನ ತೀರ್ಮಾನಕ್ಕೆ ಬರಬೇಕಾಗಬಹುದು.ಆದಾಗ್ಯೂ, ಇದು ಪ್ರಶ್ನಿತ ತೀರ್ಪಿಗೆ ಸ ೦ ಬ ೦ ಧಿಸಿದ ೦ ತೆ ತನ್ನ ಸ್ವ ೦ ತ ನಿರ್ಣ ೦ ತ ಕ ಪರ್ಯಾಯವಾಗಿರುವುದಿಲ್ಲ.ಪರಿಗಣಿಸಿದ ದೃಷ್ಟಿಕೋನವು, ದಾಖಲೆ ಮೇಲಿನ ಸಾಕ್ಷ್ಯದ ಹಿನ್ನೆಲೆಯಲ್ಲಿ ಸಾಧ್ಯತೆಯನ್ನು ಹೊಂದಿರುವಂಥದೇ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ.(ಬಂಕಿಂಗ್ ಹ್ಯಾಮ್ ಹಾಗೂ ಕರ್ನಾಟಿಕ್ ಕಂ.ಲಿ ಪ್ರಕರಣ ( 1) " ನ್ನು ನೋಡಿ.

ಮೇಲೆ ಉದ್ಧರಿಸಿದ ಪ್ಯಾರಾದ ಪರಿಶೀಲನೆಯು, ಮೊದಲ ನೋಟಕ್ಕೆ ಸಮ್ಮತವಾಗುವ ವಾದವನ್ನು ಹೇಗೆ ಪರಿಶೀಲಿಸಬೇಕು ಎಂಬುದನ್ನು ತೋರಿಸುತ್ತದೆ.ಲ್ಯಾಟಿನ್ ಪದದ ಗುಚ್ಛವಾದ ಮೊದಲ ನೋಟ ಎಂದರೆ ನೋಡಿದೊಡನೆ ಕಾಣುವುದು ಎಂದರ್ಥ.ಭಾವಿಸಿದ ವಾಸ್ತವಾಂಶವನ್ನು ರುಜುವಾತುಪಡಿಸಿದ ಹೊರತು ಅದು ನಿಜವೇ ಆಗಬೇಕಾಗುತ್ತದೆ.ಸಾಮಾನ್ಯಾರ್ಥದಲ್ಲಿ ಮೊದಲ ನೋಟ ಎಂಬ ಪದಾವಳಿಯನ್ನು ಮೇಲ್ನೋಟಕ್ಕೆ ಗಮನಿಸಿದೊಡನೆ ಸಹಜವಾಗಿ ಕಾಣುವಂತಹುದೆಂಬುದನ್ನು ವಿವರಿಸಲು ಬಳಸಲಾಗುತ್ತದೆ.ಕಾನೂನಿನ ದೃಷ್ಟಿಯಲ್ಲಿ ಸಾಮಾನ್ಯವಾಗಿ ಈ ಪದಾವಳಿಯನ್ನು ವಿವರಿಸುವ ಎರಡು ಆಯಾಮಗಳಿವೆ:ಒಂದು ಕಾನೂನು ಕ್ಲೇಮನ್ನು (ಮೊದಲ ನೋಟವಾದ) ಬೆಂಬಲಿಸಲು ಸಿವಿಲ್ ಕ್ಲೇಮುದಾರನು ಯುಕ್ತ ಸಾಕ್ಷ್ಯವನ್ನು ಅಥವಾ ಸ್ವತಃ ಸಾಕ್ಷ್ಯದ ತುಣಕನ್ನು ಹಾಜರುಪಡಿಸುವುದು.

21. ಕಾರ್ಮಿಕ ನ್ಯಾಯಾಲಯವು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಚ ನಿಗದಿಪಡಿಸಿರುವ ಮಾನದಂಡಗಳಿಗೆ ಹಾಗೂ ಈ ನ್ಯಾಯಾಲಯದ ಸನ್ಮಾನ್ಯ ವಿಭಾಗೀಯ ಪೀಠವು ನಿರ್ದೇಶಿಸಿದಂತೆ ಸ್ವತಃ ಬದ್ಧವಾಗಿರುವುದು ಎದ್ದು ಕಾಣುತ್ತದೆ.ಮುಂದುವರೆದು, ಕೈಗಾರಿಕೆಗಳ ವಿವಾದ ಅಧಿನಿಯಮದ 33 ( 2) (ಬಿ) ಪ್ರಕರಣದಡಿಯಲ್ಲಿನ ಅರ್ಜಿಯು ಸ್ವತಂತ್ರ ನಡಾವಳಿಯಾಗಿದ್ದು, ಅದು ತಾತ್ಕಾಲಿಕ ನಡಾವಳಿಯಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಈ ಸಂಬಂಧದಲ್ಲಿ, ಲಲ್ಲಾ ರಾಮ್ -ವಿರುದ್ಧ- ಡಿ.ಸಿ.ಎಂ ಕೆಮಿಕಲ್ ವರ್ಕ್ಸ್ - 1978 ಎಸ್ಸಿಸಿ (ಎಲ್ ಮತ್ತು ಎಸ್) 396, ಪ್ರಕರಣದಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿದ್ದು, ಅದರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

" ಅಧಿನಿಯಮದ 33 ( 2) (ಬಿ) ಪ್ರಕರಣದಡಿಯಲ್ಲಿನ ನಡಾವಳಿಗಳಲ್ಲಿ, ಕೈಗಾರಿಕಾ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯನ್ನು, (i) ಸೂಕ್ತ ನಿಯಮಗಳು| ಸ್ಥಾಯಿ ಆದೇಶಗಳ ಸ್ವಾಭಾವಿಕ ನ್ಯಾಯ ತತ್ವಗಳಿಗನುಸಾರವಾಗಿ ಸರಿಯಾಗಿ ಅಂತರಿಕ ವಿಚಾರಣೆಯನ್ನು ನಡೆಸಲಾಗಿರುತ್ತದೆಯೆ;(ii) ಸ್ಥಳೀಯ ನ್ಯಾಯಾಧಿಕರಣದ ಎದುರು ಮಂಡಿಸಿದ ಕಾನೂನಾತ್ಮಕ ಸಾಕ್ಷ್ಯವನ್ನು ಆಧರಿಸಿದ ವಜಾಗೆ ಸಂಬಂಧಿಸಿದ ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನೂ ರೂಪಿಸಲಾಗಿದೆಯೆ;(iii) ನಿಯೋಜಕನು, ಉದ್ಯೋಗಿಯು ತಪ್ಪಿತಸ್ಥನಾಗಿದ್ದು, ವಜಾ ಗೊಳಿಸಿರುವಿಕೆಯು, ಕಾರ್ಮಿಕ ರೂಢಿ ರಿವಾಜಿಗೆ ಕಾರಣವಾಗುವುದಿಲ್ಲ ಹಾಗೂ ಉದ್ಯೋಗಿಯನ್ನು ಬಲಿಪಶುವಾಗಿಸುವ ಉದ್ದೇಶವನ್ನು ಹೊಂದಿರಲಿಲ್ಲವೆಂಬ ತೀರ್ಮಾನಕ್ಕೆ ಪ್ರಾಮಾಣಿಕವಾಗಿ ಬಂದಿರುತ್ತಾನೆಯೇ ಎಂಬುದನ್ನು ವಿಚಾರಣೆ ನಡೆಸಲು ಸ್ಥಿರೀಕರಿಸಿರುತ್ತದೆ. ( ಈ ನ್ಯಾಯಾಲಯವು ಒತ್ತು ನೀಡಿರುತ್ತದೆ)

22. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಪಡಿಸಿದ ಮಾನದಂಡಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ನ್ಯಾಯಾಲಯವು, ವಿಚಾರಣೆಯು ನ್ಯಾಯಯುತವಾದುದು ಹಾಗೂ ಸರಿಯಾದುದೆಂದು ಕಂಡುಬಂದಿರುವುದೇ ಸಾಕಷ್ಟಾಗುವುದಿಲ್ಲವೆಂದು ಅಭಿಪ್ರಾಯಪಡಲು ಮುಂದುವರೆದಿದ್ದಾಗ್ಯೂ, ಕಾರ್ಮಿಕ ನ್ಯಾಯಾಲಯವು, ವಿಚಾರಣಾಧಿಕಾರಿಯು ನೀಡಿದ ನಿರ್ಣಯಗಳನ್ನು ಗಮನಿಸಬೇಕಾದ ಅಗತ್ಯತೆಯಿದ್ದು, ವೇದಿಕೆಯ ಮುಂದೆ ಹಾಜರುಪಡಿಸಿದ ವಸ್ತುವಿಷಯಗಳನ್ನು ಆಧರಿಸಿ ತನ್ನ ನಿರ್ಣಯವನ್ನು ವಿಚಾರಣಾಧಿಕಾರಿಯು ನೀಡಬೇಕಾಗಿರುತ್ತದೆಂಬುದನ್ನು ಕಾರಣವಾಗಿಸಬೇಕಾಗಿರುತ್ತದೆ.ವಿಚಾರಣಾಧಿಕಾರಿಯ ಎದುರು ವಸ್ತು ವಿಷಯದ ಮೌಲ್ಯಮಾಪನ/ವಿವೇಚನೆಯು ಮಾನದಂಡವಾಗಿರಬೇಕಾಗಿರುತ್ತದೆಯೇ ಹೊರತು ವಿವೇಕವಿಲ್ಲದೆ ಅಪೀಲನ್ನು ಸಲ್ಲಿಸಿದಂಥ ಕಾರಣಗಳನ್ನು ಹೇರುವಂತಿಲ್ಲ.

23. ಸ್ಥಳೀಯ ವಿಚಾರಣೆಯನ್ನು ನ್ಯಾಯಯುತವಾದ ಹಾಗೂ ಯುಕ್ತವಾದ ರೀತಿಯಲ್ಲಿ ನಡೆಸಲಾಯಿತೆಂಬ ಅಭಿಪ್ರಾಯದ ವಾಸ್ತವಾಂಶವು, ಆರೋಪಗಳನ್ನು ಕೆಲಸಗಾರರಿಗೆ ತಿಳಿಯುವಂತೆಯೇ ರೂಪಿಸಲಾಗಿದೆಯೆಂದು ಈತನಿಗೆ ಅವಕಾಶ ಮುಂತಾದವುಗಳನ್ನು ಒದಗಿಸಲಾಗಿದೆಯೆಂದೂ ಅಭಿಪ್ರಾಯಪಡಲು ಸಾಕಷ್ಟಾಗಿದ್ದು, ಕಾರ್ಮಿಕರಿಗೆ ಆರೋಪಗಳನ್ನು ತಿಳಿಸಲು ಯುಕ್ತ ಅವಕಾಶಗಳನ್ನು ಆತನಿಗೆ ನೀಡಿದ ಮಾತ್ರಕ್ಕೆ ತನ್ನ ಮುಂದೆ ಮಂಡಿಸಿದ ವಿಷಯಗಳ ಆಧಾರದ ಮೇಲೆ ಹಾಗೂ ತರ್ಕಬದ್ಧ ಕಾರಣಗಳಿಂದ ಪೂರಕ ಆಧಾರದ ಮೇಲಿನ ನಿರ್ಣಯಗಳನ್ನು ಸಮರ್ಥಿಸುವಂಥ ವರದಿಯನ್ನು ಸಲ್ಲಿಸಿದ ವಿಚಾರಣಾಧಿಕಾರಿಯು ನಿರುಪಾಧಿಕವಾಗಿರುವುದಿಲ್ಲವೆಂದೂ ಅಭಿಪ್ರಾಯಪಡಲು ಮುಂದು ವರೆದಿರುತ್ತದೆ.ಈ ಮೇಲಿನದನ್ನು ಗಮನದಲ್ಲಿಟ್ಟುಕೊಂಡು ಕಾರ್ಮಿಕ ನ್ಯಾಯಾಲಯವು ಸರಣಿ ಅರ್ಜಿಯನ್ನು ಪರಿಶೀಲಿಸಲು ಮುಂದುವರೆದಿರುತ್ತದೆ.

24. ಮುಂದುವರೆದು, ಆರೋಪಗಳ ಅನುಚ್ಛೇದ ನಿಶಾನೆ-ಎನ್ನು ಪರಿಶೀಲಿಸಿದ್ದು, ಇದು, ಪ್ರತ್ಯರ್ಜಿದಾರ ಕಾರ್ಮಿಕನು ಸ್ವತಃ ಅನಧಿಕೃತವಾಗಿ ಗೈರು ಹಾಜರಾಗಿರುತ್ತಾನೆಂದು ಆಪಾದಿಸುತ್ತದೆ.ಮತ್ತೂ ಮುಂದುವರೆದು, ಅನಧಿಕೃತ ಗೈರುಹಾಜರಿ ಎಂದರೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಬುದ್ಧಿಪೂರ್ವಕವಾಗಿ ಹಾಗೂ ಉದ್ದೇಶಪೂರ್ವಕವಾಗಿ ಗೈರು ಹಾಜರಾಗುವುದು ಎಂದು ಅಭಿಪ್ರಾಯಪಡಲಾಗಿರುತ್ತದೆ.ಒಂದು ವೇಳೆ ಗೈರುಹಾಜರಿಗೆ ಯುಕ್ತ ಕಾರಣವಿದ್ದು, ಹಿರಿಯ ಅಧಿಕಾರಿಗೆ ತಿಳಿಸಲಾಗಿದ್ದರೆ, ಅದು ಅನಧಿಕೃತ ಅಥವಾ ಉದ್ದೇಶಪೂರ್ವಕ ಗೈರುಹಾಜರಿ ಎನಿಸಿಕೊಳ್ಳುವುದಿಲ್ಲ.

25. ಇದು,ದಿನಾಂಕ: 18.08.2005 ರಿಂದ 25.08.2005 ರ ವರೆಗಿನ ಗೈರುಹಾಜರಿಗೆ ಸಂಬಂಧಿಸಿದಂತೆ ವಿಭಾಗೀಯ ನಿಯಂತ್ರಕರಿಗೆ ಡಿಪೋ ಮ್ಯಾನೇಜರ್ ನೀಡಿದ ವರದಿ ನಿಶಾನೆ ಎ 2 ವನ್ನು ಪರಿಶೀಲಿಸಲು ಮುಂದುವರೆದಿದೆ.ಅಲ್ಲದೆ, ಇದುದಿನಾಂಕ: 17.08.2005 ರಂದು ಡಿಪೋ ಮ್ಯಾನೇಜರ್ಗೆ ಪ್ರತ್ಯರ್ಜಿದಾರನು ನೀಡಿದ ರಜಾ ಅರ್ಜಿ ನಿಶಾನೆ .3 ನ್ನು ಪರಿಶೀಲಿಸಿ, ವಾಸ್ತವವಾಗಿ, ಪ್ರತ್ಯರ್ಜಿದಾರನು ರಜೆಯ ಮಂಜೂರಾತಿಗೆ ಸಂಬಂಧಿಸಿದಂತೆ ಕೋರಿಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.ಹಾಗಾಗಿ, ಪ್ರತ್ಯರ್ಜಿದಾರನು ಯಾವುದೇ ರಜಾ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ಮಾಡಿರುವ ಅರ್ಜಿದಾರ ನಿಗಮದ ಆಪಾದನೆಯು, ಮೊದಲ ನೋಟಕ್ಕೆ ದೋಷಪೂರ್ಣವಾಗಿದೆಯೆಂಬ ತೀರ್ಮಾನಕ್ಕೆ ಬಂದಿರುತ್ತಾರೆ.

26. ಅಲ್ಲದೆ, ಇದು ಡಿಪೋ ಮ್ಯಾನೇಜರ್ವವರು ಆಡಳಿತಾತ್ಮಕ ಅಧಿಕಾರಿಗೆ ಬರೆದದಿನಾಂಕ: 24.08.2005 ರ ಪತ್ರವಾದ ನಿಶಾನೆ ಎ 5 ನ್ನು ಪರಿಶೀಲಿಸಿರುತ್ತದೆ.ಅದರಲ್ಲಿ, ಪ್ರತ್ಯರ್ಜಿದಾರನು ಕೋರಿದ ರಜೆಯನ್ನು ಗೈರು ಹಾಜರಿಯೆಂದು ಪರಿಗಣಿಸಿದ್ದು ಈ ಸಂಬಂಧದಲ್ಲಿ ಡಿಪೋ ಮ್ಯಾನೇಜರ್ ಕನಕಪುರ ಡಿಪೋದ ಸಹಾಯಕ ಮೇಲ್ವಿಚಾರಕನಿಂದ ವರದಿಯನ್ನು ಪಡೆದಿರುತ್ತಾರೆ.ಆ ತರುವಾಯ ವಿಚಾರಣಾಧಿಕಾರಿಯು ನಿರ್ಣಾಯಕ ದಸ್ತಾವೇಜಾದ ಎ. ಯನ್ನು ನಿರ್ಣಯಿಸಲು ವಿಫಲನಾಗಿರುತ್ತಾನೆ.ಇದು ಸ್ವಾಭಾವಿಕ ನ್ಯಾಯದ ತತ್ವಗಳನ್ನು ಮೀರಲು ಕಾರಣವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ ಹಾಗೂ ಅನಿಲ್ ಕುಮಾರ್ ವಿರುದ್ಧ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಇತರರು - ಎ.ಐ.ಆರ್. 1985 ಎಸ್.ಸಿ. 1121, ಪ್ರಕರಣದಲ್ಲಿ ನೀಡಿದ ನಿರ್ಣಯವನ್ನು ಉದಾಹರಿಸಿದೆಯೆಂದು ಹೇಳಲಾಗಿರುತ್ತದೆ.ಅದರಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

“ಸಾಕ್ಷ್ಯವನ್ನು ಆದೇಶದ ಪಟ್ಟಿಗೆ ಸೇರಿಸಿದ್ದು, ಅವೆರಡರ ನಡುವೆ ಯಾವುದೇ ಸಾಮ್ಯತೆ ಇಲ್ಲದಿರುವುದು ಗಮನಕೊಟ್ಟು ಅವರು ಕಾರ್ಯ ನಿರ್ವಹಿಸಿರುವುದಿಲ್ಲವೆಂಬುದನ್ನು ಸುಸ್ಥಾಪಿಸಿದ್ದು, ನಾವು ಇದೊಂದು

ವಿಚಾರಣಾ ವರದಿಯೇ ಅಲ್ಲವೆಂಬ ತೀರ್ಮಾನಕ್ಕೆ ಬಂದಿರುತ್ತೇವೆ.ಆದ್ದರಿಂದ, ಈ ಪ್ರಕರಣದಲ್ಲಿನ ಯಾವುದೇ ವಿಚಾರಣೆಯು ಹೆಸರು ಉಳಿಸುವಂತಾಗಿರದೆ, ಗಮನವಿಟ್ಟು ಮಾಡದೆ ಪ್ರಕಟಿಸಿದ ಅಂಥ ನಡಾವಳಿಯನ್ನು ಆಧರಿಸಿ, ವಜಾ ಮಾಡಿದ ಆದೇಶವು ಸಮರ್ಥನೀಯವಾಗಿರುವುದಿಲ್ಲ".

27. ಮುಂದುವರೆದು, ಕಾರ್ಮಿಕ ನ್ಯಾಯಾಲಯವು, ತನ್ನ ನಿರ್ಣಯವನ್ನು ಸಮರ್ಥಿಸಿಕೊಳ್ಳಲು ಅ.ಸಾ .1 ರವರ ಪಾಟೀ ಸವಾಲನ್ನು ಉದಾಹರಿಸಿದ್ದು, ಅದರಲ್ಲಿ ಅ.ಸಾ. 1 ತನ್ನ ಮುಂದಿರುವ ರಜಾ ಅರ್ಜಿಯನ್ನು ಆತ ಸಲ್ಲಿಸಿರುತ್ತಾನೆಂದು ಒಪ್ಪಿಕೊಂಡಿದ್ದು, ಸದರಿ ರಜಾ ಅರ್ಜಿಯ ಹಾಗೂ ಅದರಲ್ಲಿ ಹೇಳಿರುವ ಕಾರಣಗಳ ನೈಜತೆಯನ್ನು ಅಧಿವಿಚಾರಿಸಲು ವಿಫಲವಾಗಿರುವ ವಿಚಾರಣಾಧಿಕಾರಿಗೆ ದೋಷವನ್ನು ಕಂಡುಕೊಳ್ಳಲು ಮುಂದಕ್ಕೆ ಕಳುಹಿಸಿದೆನೆಂದೂ ಒಪ್ಪಿಕೊಂಡಿರುತ್ತಾನೆ. ಮುಂದುವರೆದು, ನಿಶಾನೆ ಆರ್ .5 ಹಾಗೂ ಆರ್ .6 ಗಳನ್ನು ಉದಾಹರಿಸಿರುತ್ತಾರೆ.ನಿಶಾನೆ ಆರ್.,ದಿನಾಂಕ: 29.8.2005 ರಂದು ಕೆಲಸಗಾರನು ಕಳುಹಿಸಿದ ಪತ್ರವಾಗಿದ್ದು, ಆರ್.ಪಿ.ಎ.ಡಿ. ಮೂಲಕ ಡಿಪೋ ಮ್ಯಾನೇಜರ್ಗೆ ಕಳುಹಿಸಲಾಗಿರುತ್ತದೆ.ನಿಶಾನೆ .6 ವಿಭಾಗೀಯ ನಿಯಂತ್ರಕರಿಗೆ ಆರ್.ಪಿ.ಎ.ಡಿ. ಮೂಲಕ ಕಳುಹಿಸಿದ ಮತ್ತೊಂದು ಪತ್ರವಾಗಿದ್ದು, ಇದೊಂದು ಸ್ವೀಕೃತಿ ಪತ್ರವಾಗಿದ್ದು ಆರ್ .6 (ಬಿ) ಯ ಮೇರೆಗೆ ಇದನ್ನು ಕಳುಹಿಸಲಾಗಿರುತ್ತದೆ.ಅಲ್ಲದೆ, ಪ್ರತ್ಯರ್ಜಿದಾರರು ಈ ಎರಡೂ ಪತ್ರಗಳಲ್ಲಿದಿನಾಂಕ: 28.08.2005 ರ ವರೆಗೆ ರಜೆಯನ್ನು ಕೋರಿರುತ್ತಾರೆಂದು ದಿನಾಂಕ 29.08.2005 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆಂಬುದನ್ನು, ಇವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದನ್ನು ಡಿಪೋ ಮ್ಯಾನೇಜರ್ ನಿರಾಕರಿಸಿ, ವಿಭಾಗೀಯ ನಿಯಂತ್ರಕರಿಂದ ನಿರ್ದೇಶನ ಪಡೆದುಕೊಳ್ಳುವಂತೆ ನಿರ್ದೇಶಿಸಿರುತ್ತಾರೆಂಬುದನ್ನೂ ಗಮನಿಸಲಾಗಿರುತ್ತದೆ.ಹಾಗಾಗಿ, ಪತ್ರ ನಿಶಾನೆ ಆರ್ .6 ಹಾಗೂ ನಿಶಾನೆ ಆರ್ .3, ಆರ್ .5 ಹಾಗೂ ಆರ್ .6 ಗಳನ್ನು ಒಟ್ಟಿಗೆ ಓದಿದಾಗ, ನಿಶಾನೆ ಎ .3 ಯ ಮೇರೆಗೆ ರಜೆಯನ್ನು ಕೋರಿ ಸಲ್ಲಿಸಿದ್ದ ಅರ್ಜಿಯ ಸಂಬಂಧದಲ್ಲಿನ ರಜಾ ಅವಧಿ ಮುಕ್ತಾಯವಾದ ತರುವಾಯದಿನಾಂಕ: 29.08.2005 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾನೆಂಬುದು ವೇದ್ಯವಾಗುತ್ತದೆ.ಮುಂದುವರೆದು, ಕಾರ್ಮಿಕ ನ್ಯಾಯಾಲಯವು, ನಿಶಾನೆ ಆರ್ .5 ಹಾಗೂ ಆರ್ ಗಳು ವ್ಯವಸ್ಥಾಪನೆಯೊಂದಿಗೆ ಲಭ್ಯವಾಗಿದ್ದಾಗ್ಯೂ, ವಿಚಾರಣಾಧಿಕಾರಿಯ ಎದುರು ಈ ಎರಡು ದಸ್ತಾವೇಜುಗಳನ್ನು ಹಾಜರುಪಡಿಸಲಾಗಿದೆಯೆಂದು ಭಾವಿಸಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ ಹಾಗೂ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ -ವಿರುದ್ದ ಪ್ರಕಾಶ್ ಚಂದ್ ಜೈನ್, ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿನ ನಿರ್ಣಯವು ವ್ಯತಿರಿಕ್ತವಾಗಿರುತ್ತದೆಂಬ ತೀರ್ಮಾನಕ್ಕೆ ಬರಲಾಗಿರುತ್ತದೆ.

28. ನಿಶಾನೆ ಎ 3, ರಜಾ ಅರ್ಜಿಯ ನಿರಾಕರಣೆಯನ್ನು ಪ್ರತ್ಯರ್ಜಿದಾರ ಕೆಲಸಗಾರನಿಗೆ ತಿಳಿಸಿರಲಿಲ್ಲವೆಂಬ ತೀರ್ಮಾನಕ್ಕೆ ಬರಲು ವ್ಯವಸ್ಥಾಪನಾ ಪಾಟೀ ಸವಾಲು ಸಾಕ್ಷ್ಯವಾಗಿರುತ್ತದೆಂದು ಉದಾಹರಿಸಲಾಗಿರುತ್ತದೆ.ತೀರ್ಮಾನವು ಅರ್ಜಿದಾರರ ಸಾಕ್ಷ್ಯದ ಒಪ್ಪಿಗೆಯನ್ನು ಆಧರಿಸಿರುತ್ತದೆ.ಹಾಗಾಗಿ, ಕಾರ್ಮಿಕ ನ್ಯಾಯಾಲಯವು, ವಿಚಾರಣಾಧಿಕಾರಿಯು, ಪ್ರತ್ಯರ್ಜಿದಾರನೇ ಸ್ವತಃ ಅನಧಿಕೃತವಾಗಿ ಗೈರುಹಾಜರಾಗಿದ್ದನೆಂದು ತೀರ್ಮಾನಿಸಿರುತ್ತಾರೆಂದೂ, ಅಲ್ಲದೆ, ವಿಚಾರಣಾಧಿಕಾರಿಯು ತಮ್ಮ ಮುಂದೆ ಇರುವ ವಿಷಯವನ್ನು ಅವಲಂಬಿಸಿ ತೀರ್ಮಾನಕ್ಕೆ ಬಂದಿರುತ್ತದೆ ಎಂದು ಹೇಳಿ ತಪ್ಪು ಮಾಡಿರುತ್ತದೆ.

29. ವಿಭಾಗೀಯ ನಿಯಂತ್ರಕರಿಗೆ ಪ್ರತ್ಯರ್ಜಿದಾರ ಕೆಲಸಗಾರನು ದಿನಾಂಕ 20.09.2010 ರಂದು ಆರ್ .14 ಒಂದು ನಿವೇದನೆ ನೀಡಿದ್ದು, ಅದರಲ್ಲಿ ನಿಶಾನೆ, ಎ .3 ಯಲ್ಲಿ ಹೇಳಲಾದಂತೆ ರಜಾ ಅವಧಿಯು ಪೂರ್ಣಗೊಂಡ ತರುವಾಯ ತಾನು ಕೆಲಸಕ್ಕೆ ವರದಿ ಮಾಡಿಕೊಂಡಿದ್ದಾಗ್ಯೂ, ಡಿಪೋ ಮ್ಯಾನೇಜರ್ ತಾನು ಕರ್ತವ್ಯಕ್ಕೆ ಹಾಜರಾಗುವುದನ್ನು ನಿರಾಕರಿಸಿದ್ದು ತನ್ನ ರಜಾ ಅರ್ಜಿಯನ್ನು ಪರಿಗಣಿಸಿರುವುದಿಲ್ಲವೆಂದು ಪುನರುಚ್ಚರಿಸಿರುತ್ತಾನೆ.ಮುಂದುವರೆದು, ಕಾರ್ಮಿಕ ನ್ಯಾಯಾಲಯವು, ವಿಚಾರಣಾಧಿಕಾರಿಯ ರಜಾ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಹಾಗೂ ರಜಾ ಅರ್ಜಿಯನ್ನು ತಿರಸ್ಕರಿಸಿರುವ ಕಾರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡದೆ, ವಾಸ್ತವಾಂಶವನ್ನು ಎತ್ತಿ ಹಿಡಿಯದೆ ಗಂಭೀರ ದೋಷವನ್ನು ಎಸಗಿದ್ದಾರೆಂಬ ತೀರ್ಮಾನಕ್ಕೆ ಬಂದಿರುತ್ತದೆ.ಅಲ್ಲದೆ, ಗೈರು ಹಾಜರಾಗುವುದನ್ನು ರೂಢಿಸಿಕೊಂಡುಬಿಟ್ಟಿರುವುದಕ್ಕೆ ಸಂಬಂಧಿಸಿದ ತೀರ್ಮಾನವು ಯಾವುದೇ ಕಾರಣಕ್ಕೂ ಸಮರ್ಥನೀಯವಾಗಿರುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ. ಪ್ರತ್ಯರ್ಜಿದಾರರು ಅನಧಿಕೃತವಾಗಿ ಗೈರುಹಾಜರಾಗುವುದನ್ನು ರೂಢಿಸಿಕೊಂಡಿದ್ದರೆಂಬ ವಿಚಾರಣಾಧಿಕಾರಿಯು ಅಭಿಪ್ರಾಯಪಟ್ಟಿದ್ದು, ವ್ಯವಸ್ಥಾಪನಾ ವರ್ಗವು ಅದಕ್ಕೆ ಪೂರಕವಾದ ಯಾವುದೇ ಅಂಥ ವಸ್ತು ವಿಷಯವನ್ನು ವಿಚಾರಣಾಧಿಕಾರಿಗಳ ಎದುರು ವಾದಿಸಿರುವುದಾಗಲೀ, ಮಂಡಿಸಿರುವುದಾಗಲೀ ಅಥವಾ ಪ್ರಚಾರ

ಮಾಡಿರುವುದಾಗಲೀ ಇಲ್ಲವೇ ಇಲ್ಲ. ಹಾಗಾಗಿ, ವಿಚಾರಣಾಧಿಕಾರಿಯು, ಪ್ರತ್ಯರ್ಜಿದಾರನು ಬುದ್ಧಿಪೂರ್ವಕವಾಗಿಯಾಗಲೀ ಹಾಗೂ ಉದ್ದೇಶ ಪೂರ್ವಕವಾಗಿಯಾಗಿಯಾಗಲೀದಿನಾಂಕ: 18.08.2005 ರಿಂದ 28.08.2005 ರ ವರೆಗೆ ಕರ್ತವ್ಯಕ್ಕೆ ಸ್ವತಃ ಗೈರುಹಾಜರಾಗಿದ್ದಾನೆಂಬ ತೀರ್ಮಾನಕ್ಕೆ ಬರಲು ಯಾವುದೇ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆಂದೂ ಕಾರ್ಮಿಕ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.

30. ಮುಂದುವರೆದು, ವಿಚಾರಣಾಧಿಕಾರಿಗಳು ನಿಶಾನೆ ಎನ್ನು ಅಲ್ಲದೆ 29.08.2005 ರಂದು ಪ್ರತ್ಯರ್ಜಿದಾರನು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದನ್ನು ಯುಕ್ತವಾಗಿ ಗುಣಾವಗುಣಗಳನ್ನು ವಿವೇಚಿಸಿರುವುದಿಲ್ಲವೆಂದೂ ಪ್ರತ್ಯರ್ಜಿದಾರರನ್ನು 29.10.2005 ರ ವರೆಗೆ 61 ದಿನಗಳ ಮಟ್ಟಿಗಿನ ಕಾರ್ಯವನ್ನು ನಿರಾಕರಿಸಲಾಯಿತೆಂಬುದನ್ನು ವಿಚಾರಣಾಧಿಕಾರಿಯಾಗಿ ಪರಿಗಣಿಸಿ, ಅವರು ಅಂಥ ತೀರ್ಮಾನಕ್ಕೆ ಬರಲಾಗಲಿಲ್ಲವೆಂದೂ ನಿರ್ಣಯಿಸಲಾಗಿರುತ್ತದೆ ಮತ್ತೂ ಮುಂದುವರೆದು, ವಿಚಾರಣಾಧಿಕಾರಿಯು ಯಾವುದೇ ತಾರ್ಕಿಕ ಕಾರಣಗಳಿಲ್ಲದೆ ಕೇವಲ ವ್ಯವಸ್ಥಾಪನಾ ಮಂಡಳಿಯ ವಾದಗಳನ್ನು ಮಾತ್ರ ಒಪ್ಪಿಕೊಂಡಿದ್ದು, ವಿಚಾರಣಾ ವರದಿಯು, ಕಾನೂನಿನ ತಾರ್ಕಿ ಕಾರಣಗಳ ಕೊರತೆಯಿಂದ ಹಾಗೂ ಸಾಕ್ಷ್ಯವನ್ನು ಸಾಬೀತು ಮಾಡುವಲ್ಲಿ ಹಾಗೂ ಮೌಲ್ಯಮಾಪನ ಮಾಡುವಲ್ಲಿ ವ್ಯತಿರಿಕ್ತವಾದ ಪರಿಣಾಮದಿಂದ ಕೂಡಿರುತ್ತದೆಂದೂ ತೀರ್ಮಾನಿಸಲಾಗಿರುತ್ತದೆ.ಮುಂದುವರೆದು, ಕಾರ್ಮಿಕ ನ್ಯಾಯಾಲಯವು, ವಿಚಾರಣಾ ವರದಿಯಲ್ಲಿ ಪ್ರತ್ಯರ್ಜಿದಾರನು ಪಾಟೀ ಸವಾಲಿನ ರೂಪದಲ್ಲಿ ನಿರೂಪಿಸಿದ ವಿಚಾರವನ್ನು ಸಂಪೂರ್ಣವಾಗಿ ಉಪೇಕ್ಷಿಸಿ, ಲಕ್ಷ್ಯವನ್ನು ಕೊಡದೆ ಸಿದ್ಧಪಡಿಸಲಾಗಿರುತ್ತದೆಂದೂ ಸಹ ಅಭಿಪ್ರಾಯಪಟ್ಟಿರುತ್ತದೆ.

31. ಮತ್ತೂ ಮುಂದುವರೆದು, ಕಾರ್ಮಿಕ ನ್ಯಾಯಾಲಯವು, ವಿಚಾರಣಾ ವರದಿಯನ್ನು ನಿಶಾನೆ ಎ 30 ಆದ ಎರಡನೇ ಕಾರಣ ಕೇಳುವ ನೋಟೀಸಿನೊಂದಿಗೆ ಕಳುಹಿಸಲಾಗಿರುತ್ತದೆಂದೂ, ಎರಡನೇ ಕಾರಣ ಕೇಳುವ ನೋಟೀಸಿನೊಂದಿಗೆ ಪ್ರತ್ಯರ್ಜಿದಾರ ಪೂರ್ವೇತಿಹಾಸವನ್ನು ಹೇಳುವಂಥ ನಿಶಾನೆ ಎ 29 ನ್ನು ಲಗತ್ತಿಸಿದ್ದು, ಸದರಿ ಎ 29 ಪ್ರತ್ಯರ್ಜಿದಾರನ 31 ದುರ್ನಡತೆಗಳನ್ನು ಪಟ್ಟಿ ಮಾಡಲಾಗಿರುತ್ತದೆಂದೂ ಅಭಿಪ್ರಾಯಪಟ್ಟಿರುತ್ತದೆ.ಮುಂದುವರೆದು ಇದರಲ್ಲಿನ ಯಾವುದೇ ಆಪಾದಿತ ದುರ್ನಡತೆಯನ್ನು, ಅವರು ವಿಲೆ ಮಾಡಿದ ಆದೇಶಗಳನ್ನು ಹಾಜರುಪಡಿಸುವ ಮೂಲಕ ಸಮರ್ಥಿಸಿರುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ.ಎಡಬ್ಲ್ಯೂ 2 ರ ಒಪ್ಪಿಗೆಗಳನ್ನು ಉದಾಹರಿಸಿ, ಪಾಟೀ ಸವಾಲಿನ ಸಂದರ್ಭವನ್ನು ಬಹಿರಂಗಪಡಿಸಿ, ಪಾಟೀ ಸವಾಲಿನ ಸಂದರ್ಭದಲ್ಲಿ ಪ್ರತ್ಯರ್ಜಿದಾರನು, ಆಪಾದಿತ ದುರ್ನಡತೆಗಳು ಸಾಬೀತಾಗಿರುವುದಿಲ್ಲವೆಂದು ಖಚಿತವಾಗಿ ಹೇಳಿರುವುದನ್ನು ಗಮನಿಸಲಾಗಿರುತ್ತದೆ.ಈ ಸಂದರ್ಭದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶವನ್ನು ಗಮನಿಸುವ ಅವಶ್ಯಕತೆ ಹಾಗೂ ಅನಿವಾರ್ಯತೆ ಇರುತ್ತದೆ.ಮೇಲಿನ 11 ನೇ ಪ್ಯಾರಾದಲ್ಲಿ ಉದ್ಧರಿಸಿದ ಆದೇಶವು, ಅರ್ಜಿದಾರ ನಿಗಮದ ಅಧಿಕಾರಿಗಳ ವರ್ತನೆ ಹಾಗೂ ನಡತೆ ಕುರಿತಂತೆ ಮಾತನಾಡುತ್ತದೆ.ಅದೂ ಕೂಡ ವಿಭಾಗೀಯ ಪೀಠದ ಎದುರು ಪಕ್ಷಕಾರರ ನಡುವೆ ಉದ್ಭವಿಸಿದ ವಾದ ವಿವಾದಗಳ ಮೇಲೆ ಹೊರಡಿಸಿದಂಥ ಡಬ್ಲ್ಯೂ.ಎ.ಸಂಖ್ಯೆ: 2363/2005 ರಲ್ಲಿನ ಆದೇಶವಾಗಿರುತ್ತದೆ.ಇದು ಪಾಟಿ ಸವಾಲಿನ 5 ನೇ ಪ್ಯಾರಾವನ್ನು ಉಲ್ಲೇಖಿಸಿ, ಅದರಲ್ಲಿ, ಸಾಕ್ಷಿದಾರನು, 10 ರೂ.ಗಳ ಜುಲ್ಮಾನೆಯನ್ನು ವಿಧಿಸಲಾಯಿತೆಂದೂ ಆದರೆ ಜುಲ್ಮಾನೆಯ ವಿಧಿಸುವಿಕೆಯನ್ನು ವಿಚಾರಣೆ ನಡೆಸಿದ ತರುವಾಯ ಅಥವಾ ಜುಲ್ಮಾನೆಯನ್ನು ವಿಧಿಸಲು ಯಾವುದೇ ಸಮರ್ಥನೀಯ ಸಾಕ್ಷ್ಯ ಎಲಾ ಇಲ್ಲದಿದ್ದಲ್ಲಿ ಜುಲ್ಮಾನೆ ವಿಧಿಸಲು ಆಗುವುದಿಲ್ಲವೆಂದು ಒಪ್ಪಿಕೊಂಡಿರುತ್ತಾನೆ.ಮುಂದುವರೆದು, ವ್ಯವಸ್ಥಾಪನಾ ಮಂಡಳಿಯ ಸಾಕ್ಷಾದಾರ ಎಡಬ್ಲ್ಯು .2 ರ ನಿವೇದನೆಗಳನ್ನು ವಿವರವಾಗಿ ಚರ್ಚಿಸಿ, ಇದು, ಅರ್ಜಿದಾರ ವ್ಯವಸ್ಥಾಪನಾ ಮಂಡಳಿಯು ಹೂಡಿದ ಪ್ರಕರಣವನ್ನು ನಿರ್ದಾಕ್ಷಿಣ್ಯವಾಗಿ ವಜಾ ಮಾಡಿರುತ್ತದೆ.ಈ ಹಿಂದಿನ ಆಪಾದಿತ ದುರ್ನಡತೆಗಳ ಸಂಬಂಧದಲ್ಲಿ ಕಾರ್ಮಿಕ ನ್ಯಾಯಾಲಯವು, ದಂಡನೆ ವಿಧಿಸುವ ಆಪಾದಿತ ಆದೇಶಗಳ ಪರಾಮರ್ಶೆಗೆ ಸಂಬಂಧಿಸಿದಂತೆ ವ್ಯವಸ್ಥಾಪನಾ ಮಂಡಳಿಯನ್ನೇ ತಪ್ಪಿತಸ್ಥನನ್ನಾಗಿಸಿರುತ್ತದೆ.ಇದನ್ನು ಈ ನ್ಯಾಯಾಲಯದ ಎದುರು ಹಾಜರುಪಡಿಸಿರುವುದಿಲ್ಲ.ಹಿಂದಿನ ಆಪಾದಿತ ದುರ್ನಡತೆಯ ಸಂದರ್ಭವು ರಿಟ್ ಅರ್ಜಿಸಂಖ್ಯೆ: 2363/2005 ರಲ್ಲಿ ಸಲ್ಲಿಸಿದ ವಿಭಾಗೀಯ ಪೀಠದ ಆದೇಶವನ್ನು ನಿಂದಿಸಿರುವುದು ಉದ್ಧಟತನದ ಕೃತ್ಯವಾಗಿದೆಯೆಂಬುದನ್ನು ಗಮನಿಸಿಕೊಳ್ಳಬೇಕಾದುದು ಅಗತ್ಯವಾಗಿದ್ದು, ಅದರಲ್ಲಿ ಈ ಮುಂದಿನಂತೆ ಆದೇಶಿಸಲಾಗಿರುತ್ತದೆ:

" ಆದಾಗ್ಯೂ, ಅಪೀಲುದಾರನ ವಿರುದ್ಧ ಈಗಾಗಲೇ ನಡೆದ ಅಥವಾ ಆರಂಭವಾದ ವಿಚಾರಣೆಗಳು ಏನನ್ನು ಮುಂದುವರೆಸ ಬಾರದೆಂಬುದನ್ನು ಸ್ಪಷ್ಟಪಡಿಸುತ್ತದೆ ".

32. ಅಲ್ಲದೆ, ನಿಶಾನೆ ಎ 29, ಒಂದು ಕಂಪ್ಯೂಟರ್ನಿಂದ ತೆಗೆದ ಪ್ರತಿಯಾಗಿದ್ದು, ವಾಸ್ತವವಾಗಿ ಯಾವುದೇ ಜುಲ್ಮಾನೆ ಅಥವಾ ದಂಡನೆಯನ್ನು ವಿಧಿಸಿರುವುದನ್ನು ನಿರೂಪಿಸುವುದಿಲ್ಲವೆಂಬುದನ್ನು ಗಮನಿಸಿಕೊಂಡು, ಸದರಿ ವಾಸ್ತವಾಂಶವು, ಶಿಸ್ತು ಪ್ರಾಧಿಕಾರವು ವ್ಯಕ್ತಿಯನ್ನು ಬಲಿಪಶು ಮಾಡಲು ಉದ್ದೇಶಿಸಿ, ನಿಶಾನೆ ಎ .30 ರಲ್ಲಿರುವಂತೆ ವಜಾಗೊಳಿಸುವ ದಂಡನೆಯನ್ನು ವಿಧಿಸಿರುತ್ತಾನೆಂದೂ ತೀರ್ಮಾನಕ್ಕೆ ಬರಲಾಯಿತು.ಅಲ್ಲದೆ, ಆಪಾದಿತ ಪೂರ್ವ ಇತಿಹಾಸವುಳ್ಳ ನಿಶಾನೆ ಎ .29 ನ್ನು ವಿಚಾರಣಾಧಿಕಾರಿಯಾಗಲೀ ಇಲ್ಲವೇ ದಸ್ತಾವೇಜುಗಳ (ದಂಡನೆ ವಿಧಿಸಿದ ಆದೇಶಗಳು) ಮೂಲಕವಾಗಲೀ, ಪ್ರತ್ಯರ್ಜಿದಾರ – ಕೆಲಸಗಾರನಿಗೆ ವಿಚಾರಣಾತ್ಮಕವಾಗಿ ಉತ್ತರ ನೀಡಲು ಸಾಧ್ಯವಾಗುವಂತೆ ಲಭ್ಯವಾಗಿಸದಿರುವುದನ್ನು ಗಮನಿಸಿ, ಪ್ರತ್ಯರ್ಜಿದಾರನ ಬಗ್ಗೆ ಪೂರ್ವಾಗ್ರಹ ಪೀಡಿತವಾಗಿಯೇ ಆತ ಆಪಾದಿತ ಆಪಾದನೆಗಳಿಗೆ ಉತ್ತರಿಸಲು ಸಾಧ್ಯವಾಗದಂತೆ ವ್ಯವಸ್ಥಿತವಾಗಿ ನೋಡಿ ಕೊಳ್ಳಲಾಗಿದೆಯೆಂದೂ ಗಮನಿಸಲಾಯಿತು.

33. ಪ್ರಸ್ತುತ ಈ ನ್ಯಾಯಾಲಯವು, ಅರ್ಜಿಯ ದೃಢಕ್ತಿಗಳನ್ನು ಪರಿಶೀಲಿಸಲು ಮುಂದುವರಿದಿದೆ.8 ನೇ ಪ್ಯಾರಾದಲ್ಲಿ, ಕಾರ್ಮಿಕ ನ್ಯಾಯಾಲಯವು, ಆಪಾದಿತ ದುರ್ನಡತೆ ಕುರಿತಂತೆ ತಮ್ಮ ನಿರ್ಣಯ ತಿಳಿಸಲು ವಿಚಾರಣಾಧಿಕಾರಿಗಳ ಮುಂದಿರುವ ಭೌತಿಕ ಸಾಕ್ಷ್ಯವನ್ನು ಮಾತ್ರ ಪರಿಶೀಲಿಸಲು ಅಗತ್ಯಪಡಿಸಲಾಗಿರುತ್ತದೆಂದು ವಾದಿಸಲಾಗಿರುತ್ತದೆ.ಅಂಥ ವಾದವು, ಅರ್ಜಿದಾರರು ಹೆಚ್ಚುವರಿ ಸಾಕ್ಷ್ಯ ಎಲಾ ನೀಡಿ, ಹೆಚ್ಚುವರಿ ದಸ್ತಾವೇಜುಗಳನ್ನು ಗುರುತು ಮಾಡಿಸಿ, ವಿಚಾರಣಾಧಿಕಾರಿಗಳನ್ನು ಒಳಗೊಂಡಂತೆ ಇಬ್ಬರು ಹೆಚ್ಚುವರಿ ಸಾಕ್ಷ್ಯಗಳನ್ನು ಪರಿಶೀಲಿಸಲಾಯಿತೆಂಬ ವಾಸ್ತವಾಂಶವನ್ನು ಮುಚ್ಚಿಟ್ಟಿರುವುದನ್ನು ಈ ನ್ಯಾಯಾಲಯದ ಎದುರು ಪ್ರಚುರಪಡಿಸಿ, ಪ್ರತ್ಯರ್ಜಿದಾರನು ಸಾಕ್ಷ್ಯವನ್ನು ನಿರೂಪಿಸಲು ವಿಫಲರಾಗಿರುತ್ತಾರೆಂದೂ, ವಿಚಾರಣಾಧಿಕಾರಿಯು ವಿಚಾರಣೆಯ ಅವಧಿಯಲ್ಲಿ ಹಾಜರುಪಡಿಸಿದ ಲಭ್ಯ ದಸ್ತಾವೇಜುಗಳ ಆಧಾರದ ಮೇಲೆ ಪ್ರಕರಣವನ್ನು ಇತ್ಯರ್ಥಪಡಿಸಿರುತ್ತಾರೆಂದೂ ವಾದಿಸಲಾಗಿರುತ್ತದೆ.ವಿಚಾರಣೆಯ ಉದ್ದೇಶವು ಕೆಲಸಗಾರನು ಸ್ವತಃ ತನ್ನನ್ನು ಸಮರ್ಥಿಸಿಕೊಳ್ಳಲು ಒದಗಿಸುವ ನ್ಯಾಯಯುತವಾದ ಹಾಗೂ ಯುಕ್ತವಾದ ಅವಕಾಶ ಮಾತ್ರವೇ ಆಗಿರುತ್ತದೆಂದೂ ವಾದಿಸಲಾಗಿರುತ್ತದೆ.ವಿಭಾಗೀಯ ನಿಯಂತ್ರಕರು ಈಗಾಗಲೇ ವರದಿ ಕಳುಹಿಸಿದ ಸಮಯದಲ್ಲಿದಿನಾಂಕ: 24.08.2005 ರಂದು ಕೆಲಸಗಾರರು ಸಲ್ಲಿಸಿದ ರಜಾ ಅರ್ಜಿಯನ್ನು ಸ್ವೀಕರಿಸಿದ್ದರಿಂದ ಇಲ್ಲಿ ಯಾವುದೇ ಸಾಂದರ್ಭಿಕತೆಗಳು ಕಂಡುಬರುವುದಿಲ್ಲವೆಂದೂ ವಾದಿಸಲಾಗಿರುತ್ತದೆ.ದಿನಾಂಕ 25.08.2005 ರಂದು ವರದಿ ಕಳುಹಿಸುವುದಕ್ಕೆ ಮೊದಲೇ ದಿನಾಂಕ 23.08.2005 ರಂದು ರಜಾ ಅರ್ಜಿಯನ್ನು ಸ್ವೀಕರಿಸಿರುವುದಾಗಿ ಡಿಪೋ ಮ್ಯಾನೇಜರ್ ಟಿಪ್ಪಣಿ ಮಾಡಿರುವುದರಿಂದ ಇದು ದೋಷಪೂರ್ಣವಾದ ಹೇಳಿಕೆಯೆಂಬುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.ವಾಸ್ತವವಾಗಿ ದಿನಾಂಕ 24.08.2005 ರಂದು ಕಳುಹಿಸಿರುವ ವರದಿಯು ರಜಾ ಅರ್ಜಿಯೊಂದಿಗೆ ಮಾತ್ರವೇ ಸಂಬಂಧಿಸಿರುತ್ತದೆ.ಇದು ಈ ನ್ಯಾಯಾಲಯದ ಮುಂದಿನ ಸುಧಾರಿತ ವಾದವಾಗಿರುತ್ತದೆ.ಅರ್ಜಿದಾರ ಸಂಸ್ಥೆಯಾಗಲೀ ಅಥವಾ ವಿಚಾರಣಾಧಿಕಾರಿಯಾಗಲೀ, ಪ್ರತ್ಯರ್ಜಿದಾರನು ಅನಾರೋಗ್ಯವೆಂದು ಬರೆದುಕೊಟ್ಟಿದ್ದ ರಜಾ ಅರ್ಜಿಯಲ್ಲಿನ ಸತ್ಯಾಸತ್ಯತೆ ಬಗೆಗೆ ಯಾವುದೇ ಸಂದೇಹವನ್ನು ಹೊಂದಿರಲಿಲ್ಲ.ಈ ದಿಶೆಯಲ್ಲಿ ಕೆಲಸಗಾರನಿಗೆ ಯಾವ ಸಲಹೆಯನ್ನಾಗಲೀ ಇಲ್ಲವೇ ಪಾಟಿ ಸವಾಲಿನ ಅವಧಿಯಲ್ಲಿ ಅವನು ಪ್ರತಿಕೂಲವಾಗುವಂಥ ಯಾವುದೇ ವಿಚಾರವನ್ನಾಗಲೀ ಹೇಳಿರುವುದಿಲ್ಲ.ರಜಾ ಅರ್ಜಿಯಲ್ಲಿ ತೋರಿಸಲಾದ ಕಾರಣವನ್ನು ಸಂಶಯಿಸಿದ್ದಲ್ಲಿ ಅಥವಾ ಹಾಗೆ ಮಾಡುವಂತೆ ಕೆಲಸಗಾರನನ್ನು ಕರೆದಿದ್ದಲ್ಲಿ, ಮೇಲಿನ ವಾದವನ್ನು ಪರಿಗಣಿಸಬಹುದಾಗಿತ್ತು.ಮುಂದುವರೆದು ರಜಾ ಅರ್ಜಿಯನ್ನು, ಸುಳ್ಳು ಹೇಳಲಾಗಿದೆ ಅಥವಾ ಯುಕ್ತ ಕಾರಣವನ್ನು ನೀಡಿಲ್ಲವೆಂಬ ಆಧಾರದ ಮೇಲೆ ತಿರಸ್ಕರಿಸಿರುವುದಿಲ್ಲ. ಆದರೆ ತುಂಬಾ ವಿಳಂಬವಾಗಿದೆಯೆಂಬ ಆಧಾರದ ಮೇಲೆ ತಿರಸ್ಕರಿಸಲಾಗಿರುತ್ತದೆ.ಮುಂದುವರೆದು, ಯಾವುದೇ ಮಾಹಿತಿಯಿಲ್ಲದೆ ಎಂಟು ದಿನಗಳ ಅವಧಿಯವರೆಗೆ ಗೈರುಹಾಜರಾದರೆ ಆಗ ವರದಿಯು ಆಜ್ಞಾಪಕವಾಗಿರುತ್ತದೆ.ಹಾಗಿದ್ದಲ್ಲಿ, ದಿನಾಂಕ 24.08.2005 ರ ವರದಿಯು, ಗೈರುಹಾಜರಿಯ 6 ನೇ ದಿನವೇ ಕಳುಹಿಸಿರುವುದರಿಂದ, ಅದು ಅವಧಿ ಪೂರ್ವವಾಗಿರುವುದೆ ಅಲ್ಲದೆ ಈ ವಾಸ್ತವಾಂಶವನ್ನು ಸಹ ವಿಚಾರಣಾಧಿಕಾರಿಯ ಗಮನಕ್ಕೆ ತೆಗೆದುಕೊಂಡಿರುವುದಿಲ್ಲ.ಇದು ಪ್ರಕರಣವನ್ನು ಗಂಭಿರವಾಗಿ ಮನಸ್ಸಿಟ್ಟು ವ್ಯವಹರಿಸಿಲ್ಲ ಅಥವಾ ಪೂರ್ವಾಗ್ರಹ ಪೀಡಿತರಾಗಿ ವಿಚಾರಣೆ ನಡೆಸಿರುವುದರ ದ್ಯೋತಕವೇ ಆಗಿರುತ್ತದೆ.

34. ಮುಂದುವರೆದು, ಉದ್ಯೋಗಿಯು ರಜೆಗೆ ಅರ್ಜಿ ಸಲ್ಲಿಸಿ, ಕರ್ತವ್ಯಕ್ಕೆ ಹಾಜರಾಗದಿರುವ ಮೊದಲೇ ಮ ಂಜೂರಾತಿ ಪಡೆಯಬೇಕೆ ಂ ದು ಅಗತ್ಯಪಡಿಸಲಾಗುತ್ತದೆಂದು ವಾದಿಸಲಾಗಿರುತ್ತದೆ.ಪ್ರಸ್ತುತ ಪ್ರಕರಣದಲ್ಲಿ, ಡಿಪೋ ಮ್ಯಾನೇಜರ್ ವರದಿಯನ್ನು ಸಲ್ಲಿಸಿದ ತರುವಾಯ ರಜಾ ಅರ್ಜಿಯನ್ನು ಸ್ವೀಕರಿಸಿರುವುದರಿಂದ, ರಜಾ ಅರ್ಜಿಯೆಂದು ಮಾತ್ರ ಅದನ್ನು ಅರ್ಥೈಸುವಂತಿರುವುದಿಲ್ಲ.ಮುಂದುವರೆದು, ಸದರಿ ರಜಾ ಅರ್ಜಿಯಲ್ಲಿ ವೈದ್ಯಕೀಯ ರಜಾ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.ವಿಚಾರಣಾಧಿಕಾರಿಯು, ರಜಾ ಅರ್ಜಿಯನ್ನು ತಡವಾಗಿ ಸಲ್ಲಿಸಲಾಗಿದೆಯೆಂಬ ತೀರ್ಮಾನವನ್ನು ದಾಖಲಿಸಿರುವುದು ಸರಿಯಾಗಿಯೇ ಇದೆ. ಹಾಗಾಗಿ, ಅನಧಿಕೃತವಾಗಿ ಆತ ಗೈರು ಹಾಜರಾಗಿದ್ದಾನೆಂಬ ಇವರ ಅಭಿಪ್ರಾಯ ಸಿಂಧುವಾದುದಾಗಿರುತ್ತದೆ.ಕಾರ್ಮಿಕ ನ್ಯಾಯಾಲಯವು, ಸದರಿ ದಸ್ತಾವೇಜುಗಳು ವಿಚಾರಣಾ ವರದಿಯ ಭಾಗವಾಗದಿದ್ದಾಗ್ಯೂ ಕಾರ್ಮಿಕ ನ್ಯಾಯಾಲಯದ ಎದುರು ಪ್ರತ್ಯರ್ಜಿದಾರ-ಕೆಲಸಗಾರನು ಮಂಡಿಸಿದ ವಸ್ತು ವಿಷಯದ ಮೇಲೆ ನಂಬಿಕೆಯಿರಿಸಿ ದೋಷವನ್ನು ಎಸಗಿರುತ್ತದೆ ಹಾಗೂ ವಜಾ ಆದೇಶದ ಸರಿತನವನ್ನು ಪರೀಕ್ಷಿಸುವುದನ್ನು ಕಾರ್ಮಿಕ ನ್ಯಾಯಾಲಯವು ಪರಿಗಣಿಸಿರುವುದಿಲ್ಲ.ಈ ಸಂಬಂಧದಲ್ಲಿ, ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ಮುಖ್ಯಸ್ಥರಾಗಿರುವ ಈ ನ್ಯಾಯಾಲಯದ ವಿಭಾಗೀಯ ಪೀಠವು ಹೊರಡಿಸಿದ ಆದೇಶವನ್ನು ಹಿಂದಕ್ಕೆ ತರಿಸಿಕೊಳ್ಳುವುದು ಸಮುಚಿತವಾಗಿರುತ್ತದೆ.ಆದೇಶವನ್ನು ಈ ಹಿಂದೆ ಉಲ್ಲೇಖಿಸಿದ ರಿಟ್ ಅರ್ಜಿ ಸಂಖ್ಯೆ 537-538/2013 ರಲ್ಲಿ ಹೊರಡಿಸಬೇಕಾಗಿರುತ್ತದೆ.ಅದರಲ್ಲಿ ವಿಭಾಗೀಯ ಪೀಠವು, ಎಲ್ಲಾ ರೀತಿಯ ಕಾನೂನು ವಾದ-ವಿವಾದಗಳನ್ನು ಮುಕ್ತವಾಗಿಡಲಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ.ಅದರೊಂದಿಗೆ, ಈ ನ್ಯಾಯಾಲಯವು ಅರ್ಜಿದಾರರ ನಡತೆಯನ್ನು ಗಂಭೀರವಾಗಿ ಪರಿಗಣಿಸಿದೆ.ಮತ್ತೊಂದು ರೀತಿಯಲ್ಲಿ, ವಿಚಾರಣಾಧಿಕಾರಿಯ ನಿರ್ಣಯದ ಸರಿತನದ ಮೇಲಿನ ನಿಯಮಕ್ಕೆ ಯಾವುದೇ ಹೊರಗಿನ ವಸ್ತು ವಿಷಯವನ್ನು ಗಮನಿಸುವಂತಿಲ್ಲವೆಂದು ಆದರೆ ವಿಚಾರಣಾಧಿಕಾರಿಯ ಮುಂದೆ ಮಂಡಿಸಿದ ವಸ್ತು ವಿಷಯವನ್ನು ಸ್ವತಃ ನಿಗ್ರಹಿಸಿದೆ ಎಂದು ವಾದಿಸಿ ನಿರೂಪಿಸಿರುತ್ತದೆ.

35. ಕಾರ್ಮಿಕ ನ್ಯಾಯಾಲಯವು, ಇತರೆ ವಸ್ತು ವಿಷಯವನ್ನು ಗಮನಿಸಿದೆ ಎಂದಾದರೆ, ಅದು ಕೇವಲ ಅರ್ಜಿದಾರರ ಸಂದರ್ಭದಲ್ಲಿ ಮಾತ್ರವಾಗಿದೆ.ಇದು, ಕಾರ್ಮಿಕ ನ್ಯಾಯಾಲಯದ ಎದುರು 18 ಹೆಚ್ಚುವರಿ ದಸ್ತಾವೇಜುಗಳನ್ನು ಪರಿಚಯಿಸಿ, ಎರಡು ಹೆಚ್ಚುವರಿ ಸಾಕ್ಷ್ಯವನ್ನು ಪರಿಶೀಲಿಸಿದಂಥ ಅರ್ಜಿದಾರ ಸಂಸ್ಥೆಯಾಗಿರುತ್ತದೆ.ಕಾರ್ಮಿಕ ನ್ಯಾಯಾಲಯದ ಮುಂದೆ ಸಾಕ್ಷ್ಯ ಹೇಳಿದಂಥ ಸಾಕ್ಷಿದಾರರು ವಿಚಾರಣಾಧಿಕಾರಿಗಳ ಮುಂದೆ ಸಾಕ್ಷಿ ಹೇಳಿರುವುದಿಲ್ಲ.ಆದರೆ ಕಾರ್ಮಿಕ ನ್ಯಾಯಾಲಯದ ಮುಂದೆ ಹೇಳದಂಥ " ಹಿಂದಿನ ತಪ್ಪು ದುರ್ನಡತೆಗಳ ಬಗೆಗೆ ಸ್ವತಃ ವಿಚಾರಣಾಧಿಕಾರಿಗಳು ಹಾಗೂ ಮತ್ತೊಬ್ಬ ಮೇಲ್ವಿಚಾರಕರೇ ಮಾತನಾಡಿರುತ್ತಾರೆ.ಅವರ ಪರವಾದ ನಿರ್ಣಯವನ್ನು ನೀಡಿ ಕಾರ್ಮಿಕ ನ್ಯಾಯಾಲಯವನ್ನು ಬಲಪಡಿಸಲು, ಅರ್ಜಿದಾರ ಸಂಸ್ಥೆಯನ್ನು ಅನ್ಯಥಾ ವಾದ ಮಾಡುವುದರಿಂದ ಪ್ರತಿಬಂಧಿಸಬೇಕಾಗುತ್ತದೆ.ಅರ್ಜಿದಾರ ಸಂಸ್ಥೆಯನ್ನು ಸಮ್ಮತಿಸಲು ಅಥವಾ ಅಸಮ್ಮತಿಸಲು ಅನುಮತಿಸುವಂತಿಲ್ಲ.ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ ಇದು ಕಾನೂನುಬಾಹಿರವಾಗಿಲ್ಲದಿದ್ದು, ಮಾರ್ಟಿನ್ ಬರ್ನ್ಸ್ ಪ್ರಕರಣದಲ್ಲಿ, ಇದು ಕಾರ್ಮಿಕ ನ್ಯಾಯಾಲಯವು, ಬಲಿಪಶುವಾಗುವಿಕೆಯ ಹಾಗೂ ಅನುಚಿತ ಕಾರ್ಮಿಕ ನಡವಳಿಕೆಯ ಆಪಾದನೆ ಹಾಗೂ ಪ್ರತ್ಯರ್ಜಿದಾರ ಕಾರ್ಮಿಕನು ಕೆಲವು ಮಂದಿ ಅಧಿಕಾರಿಗಳು, ಅವರ ಅಧಿಕಾರವನ್ನು ವಾಸ್ತವವಾಗಿ ಹಾಗೂ ಅವರೇ ಊಹಿಸಿಕೊಂಡ ನಡತೆಗಳಿಗೆ ಸಂಬಂಧಿಸಿದಂತೆ ಪ್ರತೀಕಾರ ತೀರಿಸಿಕೊಳ್ಳಲು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ಮಾಡಿರುವ ಆಪಾದನೆಗಳನ್ನು ಕುರಿತಂತೆ ನೋಡಿಕೊಳ್ಳಲು ಹಾಗೂ ವಿಚಾರಣೆ ನಡೆಸಲು ಹಕ್ಕುಳ್ಳದ್ದಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

36. ಕಾರ್ಮಿಕ ನ್ಯಾಯಾಲಯವು, ವಿಚಾರಣಾಧಿಕಾರಿಗಳ ಎದುರು ಮಂಡಿಸಿದ ದಸ್ತಾವೇಜುಗಳ ಉಲ್ಲೇಖದೊಂದಿಗೆ ಮಾತ್ರ ವಜಾದ ಆದೇಶದ ಸಿಂಧುತ್ವ ಹಾಗೂ ಸರಿತನವನ್ನು ಪರೀಕ್ಷಿಸಬೇಕಾಗಿರುತ್ತದೆ.ಕಾರ್ಮಿಕ ನ್ಯಾಯಾಲಯದ ಎದುರು ಹಾಜರುಪಡಿಸಿದ ದಸ್ತಾವೇಜುಗಳು ಶಿಸ್ತುಪ್ರಾಧಿಕಾರದೊಂದಿಗೆ ಲಭ್ಯವಾಗಿರುವುದಿಲ್ಲ.ಕಾರ್ಮಿಕ ನ್ಯಾಯಾಲಯವು, ವಿಭಾಗೀಯ ಪೀಠವು ರದ್ದು ಪಡಿಸಿರುವಂಥ ಡ ಬ್ಲ್ಯೂ.ಪಿ. ಸಂಖ್ಯೆ .10271/2014 ರಲ್ಲಿ ಹೊರಡಿಸಿದ ಆದೇಶ ದಿ ಂ ದ ಪ್ರಭಾವಿತವಾಗಿರುತ್ತದೆ.ಕೈಗಾರಿಕಾ ವಿವಾದಗಳ 33 ( 2) (ಬಿ) ಪ್ರಕರಣದಡಿಯಲ್ಲಿನ ಅರ್ಜಿಯ ಮೇಲಿನ ವಿಚಾರಣೆಯ ವ್ಯಾಪ್ತಿಯು ತುಂಬಾ ಸೀಮಿತವಾಗಿರುತ್ತದೆ.ಮೇಲಿನ ವಾದ-ವಿವಾದಗಳನ್ನು ಸರಿತೂಗಿಸಲು, ಡಬ್ಲ್ಯೂ.ಪಿ.ಸಂಖ್ಯೆ.10271/2014 ರಲ್ಲಿನ ಆದೇಶದಿಂದ ಪ್ರಭಾವಿತವಾದ ಕಾರ್ಮಿಕ ನ್ಯಾಯಾಲಯವು ಪ್ರಶ್ನಿತ

ಆದೇಶದ 20 ನೇ ಪ್ಯಾರಾದ ಓದಿನ ಮೂಲಕ ಸಾಕ್ಷ್ಯವಾಗಿ ನಿಲ್ಲುತ್ತದೆಂಬ ವಾಸ್ತವಾಂಶವನ್ನು ವಾದಿಸಲಾಗಿರುತ್ತದೆ.ಅನುಕೂಲತೆಯ ಕಾರಣಕ್ಕಾಗಿ 20 ನೇ ಪ್ಯಾರಾವನ್ನು ಈ ಮುಂದಿನಂತೆ ಉದ್ಧರಿಸಲಾಗಿರುತ್ತದೆ:

" ಇದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರನೇ ಖುದ್ದಾಗಿ, ತೀರ್ಪುಗಳ ಮೇಲೆ ಅವಲಂಬಿತನಾಗಿದಿನಾಂಕ: 21.11.2014 ರಂದಿನ ಅರ್ಜಿಸಂಖ್ಯೆ: 10271/2014 (ಎಲ್ ಕೆ.ಎಸ್.ಆರ್.ಟಿ.ಸಿ) ರ ಆದೇಶ ಪ್ರತಿಯನ್ನು ಹಾಜರುಪಡಿಸಿ ಲಿಖಿತ ವಾದಗಳನ್ನು ಸಲ್ಲಿಸಿ, ಪುನರವಲೋಕನ ಅರ್ಜಿಯನ್ನು ವಜಾಗೊಂಡಿರುವದಿನಾಂಕ: 2.9.2016 ರ ಆದೇಶದೊಂದಿಗೆ ಸನ್ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಇವರು ಸಲ್ಲಿಸಿದ್ದ 375/2016 ಎಂಬ ಸಂಖ್ಯೆಯನ್ನು ಹೊಂದಿದ್ದ ಪುನರವಲೋಕನ ಅರ್ಜಿಯ ಪ್ರತಿಯನ್ನು ಸಹ ಹಾಜರುಪಡಿಸಲಾಗಿರುತ್ತದೆ ".

37. ಮೇಲಿನ ಪ್ಯಾರಾದ ಸಾಧಾರಣ ಓದಿನಿಂದ, ಒಬ್ಬರೇ ಪಕ್ಷಕಾರರು ಉದಾಹರಿಸಿದ ಉಲ್ಲೇಖ ಮಾತ್ರವೇ ಸಂಪೂರ್ಣವಾಗಿ ಪ್ರಭಾವಿಸುವಂಥ ನ್ಯಾಯಾಲಯದಲ್ಲಿನ ವಾಸ್ತವಾಂಶದ ಸಾಕ್ಷ್ಯವಾಗಿ ಪರಿಣಮಿಸಲು ಹೇಗೆ ಸಾಧ್ಯ ಎಂಬುದನ್ನು ಒಪ್ಪಿಕೊಳ್ಳಲು ಈ ನ್ಯಾಯಾಲಯಕ್ಕೆ ಕಷ್ಟ ಸಾಧ್ಯವಾಗಿರುತ್ತದೆಂಬುದು ಕಂಡು ಬಂದಿದೆ.ಕಾರ್ಮಿಕ ನ್ಯಾಯಾಲಯವು ಕೇವಲ ಪ್ರತ್ಯರ್ಜಿದಾರನು ಸಲ್ಲಿಸಿದ ಸಾಕ್ಷ್ಯವನ್ನು ಮಾತ್ರ ವಿವರಿಸಿರುತ್ತದೆ.ಕಾರ್ಮಿಕ ನ್ಯಾಯಾಲಯವು, ದಿನಾಂಕ 6.10.2013 ರ ಆದೇಶದ 25 ನೇ ಪ್ಯಾರಾದಲ್ಲಿ ಕಾರ್ಮಿಕ ನ್ಯಾಯಾಲಯವು ಈ ಮೊದಲು ಅಭಿಪ್ರಾಯಪಟ್ಟಂತೆಯೇ ಪ್ರಶ್ನಿತ ಆದೇಶದ 54 ನೇ ಪುಟದಲ್ಲಿ ಅಭಿಪ್ರಾಯಪಟ್ಟಿದೆಯೆಂದೂ, ಅದು ವಿಭಾಗೀಯ ಪೀಠವು ರದ್ದುಪಡಿಸಿದಂಥ ಆದೇಶದ ಭಾಗವನ್ನು ಮತ್ತೊಮ್ಮೆ ಸಾಬೀತುಪಡಿಸುವುದಕ್ಕೆ ಕಾರಣವಾಗಿದೆಯೆಂದೂ ಹಾಗಾಗಿ, ಇದು ನಿರರ್ಥಕವಾಗಿದೆಯೆಂದೂ ವಾದಿಸಲಾಗಿದೆ.ಇದು, ಕಾರ್ಮಿಕ ನ್ಯಾಯಾಲಯವು ಮಾರ್ಟಿನ್ ಬರ್ನ್ ಅ -ವಿರುದ್ಧ ಆರ್.ಎನ್. ಬ್ಯಾನರ್ಜಿಯವರ ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ವಗಳನ್ನು ಚ ಪರಿಗಣಿಸುವಲ್ಲಿ ವಿಫಲವಾಗಿದೆಯೆಂದು ಅಭಿಪ್ರಾಯಪಟ್ಟಿದೆ.ವಿಚಾರಣಾ ದಾಖಲೆಗಳ ಭಾಗವಾಗಿರದಂಥ ನಿಶಾನೆ ಆರ್ .5 ಹಾಗೂ ಆರ್ .6 ಮೇಲೆ ನಂಬಿಕೆ ಇರಿಸಿ ಕಾರ್ಮಿಕ ನ್ಯಾಯಾಲಯವು ತಪ್ಪು ಮಾಡಿದೆಯೆಂದು ವಾದಿಸಲಾಗಿದೆ.ಕೃಷ್ಣಕಾಂತ್ ಪರಾಮರ್ ಪ್ರಕರಣದ ಮೇಲೆ ನಂಬಿಕೆಯು ತಪ್ಪಿನ ನಡೆಯಾಗಿದ್ದು, ನಿಗಮವು, ಅನಧಿಕೃತ ಗೈರುಹಾಜರಿಯು ಉದ್ದೇಶಪೂರ್ವಕ ಅಥವಾ ಬುದ್ಧಿ ಪೂರ್ವಕವಾಗಿತ್ತೆಂದು ಸಾಬೀತುಪಡಿಸುವ ಅವಶ್ಯಕತೆ ಇರಲಿಲ್ಲವೆಂದು ವಾದಿಸಲಾಗಿರುತ್ತದೆ.ಆತ ರಜಾ ಅರ್ಜಿಯಲ್ಲಿ ಅನಾರೋಗ್ಯದ ಕಾರಣವನ್ನು ನಮೂದಿಸಿದ್ದು, ಅದಕ್ಕೆ ಪೂರಕವಾದ ಯಾವುದೇ ದಸ್ತಾವೇಜಿಯ ಸಾಕ್ಷ್ಯವಿರುವುದಿಲ್ಲವೆಂದೂ ವಾದಿಸಲಾಗಿರುತ್ತದೆ.ಮುಂದುವರೆದು, ಪ್ರತ್ಯರ್ಜಿದಾರನು ನಿಗಮದ ಅಧಿಕಾರಿಗಳ ವಿರುದ್ಧ ಬಳಸಿದ ಭಾಷೆಯಲ್ಲಿ ಸಂಯಮವನ್ನು ತೋರಲೇಬೇಕಿತ್ತು.ಈತ ಬಳಸಿರುವ ಭಾಷೆ ಅನಪೇಕ್ಷಿತ, ಅನುಚಿತ ಹಾಗೂ ಆಕ್ಷೇಪಣೀಯವಾದುದಾಗಿರುತ್ತದೆಂದೂ ವಾದಿಸಲಾಗಿರುತ್ತದೆ.

38. ಮುಂದುವರೆದು, ಅರ್ಜಿದಾರರು ಯಾವುದೇ ವಾಸ್ತವಾಂಶ, ಅಥವಾ ವಸ್ತುವಿಷಯವನ್ನು ಮರೆ ಮಾಡಿಲ್ಲವೆಂಬುದರಲ್ಲಿ ಯಾವುದೇ ಆಪಾದನೆಯಿಲ್ಲದಿರುವುದರಿಂದ 29 ವರ್ಷಗಳ ಸೇವೆ ಸಲ್ಲಿಸಿರುವ ಅಂಶದ ಅಥವಾ ವಯೋನಿವೃತ್ತಿ ಹೊಂದುವ ಅಂಶವನ್ನು ಪ್ರಸ್ತಾಪಿಸಿರುವುದು ಸಮಂಜಸವಾಗಿರುವುದಿಲ್ಲ.ವಜಾ ಆದೇಶವನ್ನು ಹೊರಡಿಸುವಲ್ಲಿ ದುರ್ಭಾವನೆ ಇರಲಿಲ್ಲವೆಂಬ ತಮ್ಮ ವಾದವನ್ನು ಸಾಬೀತುಪಡಿಸಿಕೊಳ್ಳುವ ಅವಕಾಶವನ್ನು ಬಳಸಿಕೊಳ್ಳಲು ಈತ ವಿಫಲನಾಗಿರುವುದರಿಂದ ಮರೆಮಾಚಲಾಗಿದೆಯೆಂದು ದೂರುವಂತಿಲ್ಲವೆಂದೂ ವಾದಿಸಲಾಗಿರುತ್ತದೆ.ಅರ್ಜಿದಾರನುದಿನಾಂಕ: 23.03.2017 ದಿನಾಂಕದ ಮೆಮೊವನ್ನು ದಿನಾಂಕ 5.9.2005 ರ ಕಾಲ್ ಲೆಟನ್ನುರ್ ಲಗತ್ತಿಸುವುದರೊಂದಿಗೆ ಹಾಗೂದಿನಾಂಕ: 20.9.2005 ರಂದು ಪ್ರತ್ಯರ್ಜಿದಾರನು ಇದಕ್ಕೆ ನೀಡಿದ ಉತ್ತರವನ್ನು ಲಗತ್ತಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ.ಆದರೆ ಅದರಲ್ಲಿದಿನಾಂಕ: 5.09.2010 ರಂದು ಕಾಲ್ ಲೆಟರ್ ಅನ್ನು ನೀಡಿದ್ದಾಗ್ಯೂ, ದಿನಾಂಕ 29.10.2005 ರಿಂದ ಮಾತ್ರ ಕೆಲಸಗಾರನಿಗೆ ಕರ್ತವ್ಯಕ್ಕೆ ಪುನಃ ಹಾಜರಾಗಲು ಅನುಮತಿಸಲಾಯಿತೆಂಬುದಕ್ಕೆ ಯಾವುದೇ ವಿವರಣೆ ಇರುವುದಿಲ್ಲ.ಕೆಲಸಗಾರನ ಪಾಟಿ ಸವಾಲಿನಲ್ಲಿ ಕಾಲ್ ಲೆಟರ್ ಅನ್ನು ಸ್ವೀಕರಿಸಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಗೈರುಹಾಜರಾದ ಬಗೆಗೆ ಏನನ್ನೂ ಹೇಳಿರುವುದಿಲ್ಲ.

39. ಇದಕ್ಕೆ ಉತ್ತರವಾಗಿ, ಪ್ರತ್ಯರ್ಜಿದಾರನು, ಅರ್ಜಿದಾರನು ಸಲ್ಲಿಸಿದ ಪ್ರತಿವಾದ, ತನ್ನನ್ನು ಸುತ್ತುವರಿದ ಆಪಾದನೆಗಳಿಂದ ತನ್ನನ್ನು ಬಲಿಪಶುವಾಗುವಂತೆ ಮಾಡಿದಂತ ಕ್ರಮಗಳಿಗೆ ಆಕ್ಷೇಪಣೆಗಳ ಹೇಳಿಕೆ ಹಾಗೂ

ಹೆಚ್ಚುವರಿ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿರುತ್ತಾನೆ.ಪ್ರಸ್ತುತ ಈ ನ್ಯಾಯಾಲಯವು ಕಾರ್ಮಿಕ ನ್ಯಾಯಾಲಯವು ಕಾನೂನು ಬಾಹಿರವಾಗಿ ಅಥವಾ ಸಾಕ್ಷ್ಯವನ್ನು ಲಕ್ಷಿಸುವಾಗ ವ್ಯತಿರಿಕ್ತವಾಗಿ ನಡೆದುಕೊಂಡಿದೆಯೇ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ.

40. ಅರ್ಜಿದಾರರು ಕಾರ್ಮಿಕ ನ್ಯಾಯಾಲಯದ ಆದೇಶದಲ್ಲಿ ಕಾನೂನು ಬಾಹಿರತೆ ಹಾಗೂ ವ್ಯತಿರಿಕತೆಯ ಬಗ್ಗೆ ಚರ್ಚಿಸಿರುವ ತೀರ್ಪುಗಳ ಮೇಲೆ ಅವಲಂಬಿತನಾಗಿದ್ದಾನೆ.

41. ಅರ್ಜಿದಾರರು ಮಾರ್ಟಿನ್ ಬರ್ನ್ ಅ. -ವಿರುದ್ಧ-ಆರ್.ಎನ್.ಬ್ಯಾನರ್ಜಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ಣಯಗಳನ್ನು ಚ ಉದಾಹರಿಸಿರುವುದರ ಜೊತೆಗೆ ಐಎನ್ಎಸ್ಆರ್ಟಿಸಿ ವ್ಯವಸ್ಥಾಪನೆ ವಿರುದ್ಧ ಎಂ. ಚಂದ್ರಶೇಖರನ್, ಪ್ರಕರಣದಲ್ಲಿ ನೀಡಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ ವರದಿಯಾಗದ ತೀರ್ಪನ್ನು ಸಹ ಈ ಸಂದರ್ಭದಲ್ಲಿ ಮಂಡಿಸಿರುತ್ತಾರೆ.ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಆತನು ಮಾರಣಾಂತಿಕ ಚ ಗಾಯ ಹಾಗೂ ಅಪಘಾತ ಮಾಡುವುದರ ಮೂಲಕ ಮರಣಕ್ಕೆ ಕಾರಣನಾದ ಕೆಲಸಗಾರನ ವಿರುದ್ಧ ತೆಗೆದುಕೊಂಡ ಶಿಸ್ತುಕ್ರಮಗಳ ಪ್ರಕರಣದೊಂದಿಗೆ ವ್ಯವಹರಿಸಿರುತ್ತದೆ.ಇಲಾಖೆಯ ಪ್ರತ್ಯಕ್ಷದರ್ಶಿಗಳಾಗಿದ್ದಂಥ ಕಂಡಕ್ಟರನನ್ನಾಗಲೀ ಅಥವಾ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರನ್ನಾಗಲೀ ತನಿಖೆ ಮಾಡಲಿಲ್ಲವೆಂಬ ವಾದವನ್ನು ಪ್ರಸ್ತಾಪಿಸಲಾಗಿರುತ್ತದೆ.ಹಾಗಾಗಿ, ಕಾರ್ಮಿಕ ನ್ಯಾಯಾಲಯವು ಕೆಲಸಗಾರನ ಗೈರುಹಾಜರಿಯನ್ನು ಮಾಫಿ ಮಾಡುವುದು ಯುಕ್ತವೆಂದು ಭಾವಿಸಿರುತ್ತದೆ.ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ವಿಧಿತ ಸಿದ್ಧಾಂತವನ್ನು ಪ್ರಸ್ತಾಪಿಸಿ, ದಂಡನೆಯನ್ನು ಎತ್ತಿಹಿಡಿಯಲು ತಿಳಿಸಿರುತ್ತದೆ.ಸದರಿ ವಾಸ್ತವಾಂಶಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪ್ರಸ್ತುತ ಪ್ರಕರಣದಲ್ಲಿ ಸ್ವಯಂ ವಿಧಿತ ಸಿದ್ಧಾಂತದ ತತ್ವಗಳನ್ನು ನೇರವಾಗಿ ಅನ್ವಯಿಸುವಂತೆ ಸೂಚಿಸಿದೆ.ಸದರಿ ತತ್ವಗಳ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯಿಸುವುದಿಲ್ಲ.ಸನ್ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು, ಮಾರ್ಟಿನ್ ಬರ್ನ್ ಅ -ವಿರುದ್ಧ ಆರ್. ಎನ್. ಬ್ಯಾನರ್ಜಿ ಪ್ರಕರಣದಲ್ಲಿ ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ, ಆಯುಕ್ತರು, ಕೈಗಾರಿಕಾ ವಿವಾದಗಳ ಅಧಿನಿಯಮದ 33 (2) (ಬಿ) ಪ್ರಕರಣದಡಿಯಲ್ಲಿನ ದಂಡನೆಯ ಆದೇಶದ ಅನುಮೋದನೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಪರಿಗಣಿಸುವಾಗ ತಪ್ಪನ್ನು ಎಸಗಿರುತ್ತಾರೆಂದು ಅಭಿಪ್ರಾಯ ಪಟ್ಟಿರುತ್ತದೆ.ಸದರಿ ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಆಯುಕ್ತರು ಸಾಕ್ಷ್ಯವನ್ನು ಮರು ವಿವೇಚಿಸುವಲ್ಲಿ ಚ ಹಾಗೂ ತನ್ನ ತೀರ್ಪಿನೊಂದಿಗೆ ವಿಚಾರಣಾಧಿಕಾರಿಗಳ ವರದಿಯನ್ನು ಪ್ರತಿಯೋಜಿಸುವಲ್ಲಿ ತಪ್ಪನ್ನು ಮಾಡಿದ್ದಾರೆಂದೂ, ಅಲ್ಲದೆ ರೂಪಿಸಿದ ಆರೋಪಗಳ ಸಂಬಂಧದಲ್ಲಿ ಇಲಾಖೆಯ ವಿಚಾರಣೆಯ ಅವಧಿಯಲ್ಲಿ ಯಾವುದೇ ಕಾನೂನು ಸಾಕ್ಷ್ಯವನ್ನು ಹಾಜರುಪಡಿಸಲಿಲ್ಲವೆಂಬ ವಾದವೂ ಆಗಿರುವುದಿಲ್ಲವೆಂಬುದನ್ನು ಗಮನಿಸಿಕೊಳ್ಳಲು ನಿರೂಪಿಸಿರುತ್ತದೆ.ಇಲಾಖಾ ವಿಚಾರಣಾವಧಿಯಲ್ಲಿ ಸಾಕಷ್ಟು ಸಾಕ್ಷ್ಯವನ್ನು ಹಾಜರುಪಡಿಸಲಾಯಿತು ಹಾಗೂ ಕೆಲಸಗಾರನು, ಕೆಲವು ಬೇರೆ ಕಾರಣಗಳಿಂದ ಅಪಘಾತ ಸಂಭವಿಸಿತು ಎಂಬುದನ್ನು ನಿರೂಪಿಸಲು ಆತನ ಮೇಲಿರುವ ಹೊಣೆಯನ್ನು ನಿಭಾಯಿಸಿರುವುದಿಲ್ಲ ಹಾಗಾಗಿ, ಸ್ವಯಂ ವಿಧಿತ ಸಿದ್ಧಾಂತವು ನೇರವಾಗಿ ಅನ್ವಯವಾಗುತ್ತದೆಂಬುದು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿರುತ್ತದೆ.ಪ್ರಸ್ತುತ ಪ್ರಕರಣದಲ್ಲಿ ವಿಚಾರಣಾಧಿಕಾರಿಯ ಮುಂದಿರುವ ಸಾಕ್ಷ್ಯವು, ಆರೋಪಗಳನ್ನು ರುಜುವಾತುಪಡಿಸುತ್ತದೆಂಬ ತೀರ್ಮಾನಕ್ಕೆ ಬರಲು ಬೇಕಾಗಿರುವಷ್ಟು ಎ ಯುಕ್ತ ಸಾಕ್ಷ್ಯವಾಗಿರುವುದಿಲ್ಲವೆಂಬುದು ಕಾರ್ಮಿಕ ನ್ಯಾಯಾಲಯದ ಪ್ರುವರ್ಗೀಯ ಅಭಿಪ್ರಾಯವಾಗಿರುತ್ತದೆ.ವಾಸ್ತವವಾಗಿ ಕಾರ್ಮಿಕ ನ್ಯಾಯಾಲಯ ಸ್ಪಷ್ಟವಾಗಿ, ರಜಾ ಅರ್ಜಿಯ ಪರಿಗಣನೆಯನ್ನು ಮಾಡದಿರುವುದು ಇಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡು, ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಗೆ ಕಾರಣವಾಗಿರುತ್ತದೆಂದೂ ಅಭಿಪ್ರಾಯಪಟ್ಟಿರುತ್ತದೆ.

42. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಚೋಳನ್ ರೋಡ್ ವೇಸ್ –ವಿರುದ್ಧ-ಜಿ.ತಿರುಜ್ಞಾನ ಸಮಂದಮ್ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉದಾಹರಿಸಿರುತ್ತಾರೆ.ಸದರಿ ತೀರ್ಪಿನ ಪ್ರಕರಣವೂ ಕೂಡ ಸಾರಿಗೆ ಸಂಸ್ಥೆಯ ಕೆಲಸಗಾರನು ಅಪಘಾತವುಂಟಾಗಲು ಕಾರಣವಾಗಿರುವಂಥ ಪ್ರಕರಣವೇ ಆಗಿದ್ದು, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸ್ವಯಂವಿಧಿತ ಸಿದ್ಧಾಂತದ ತತ್ವಗಳ ಮೇಲೆ ಅವಲಂಬಿತವಾಗಿ, ಅಪಘಾತಗಳು ತಮ್ಮ ಕತೆಯನ್ನು ಸ್ವತಃ ಹೇಳುತ್ತವೆ ಅಥವಾ ಹೇಳುತ್ತಲಿರುತ್ತವೆಂದೂ, ಅಲ್ಲದೆ, ಒಮ್ಮೆ ಸದರಿ ಸಿದ್ಧಾಂತವನ್ನು ರುಜುವಾತುಪಡಿಸುವ

ಭಾರವನ್ನು ಅನ್ವಯವಾಗುವಂತೆ ಮಾಡಿದರೆ, ಅದು ಈತ ನಿರ್ಲಕ್ಷಿಸಿರುವುದಿಲ್ಲವೆಂಬುದನ್ನು ನಿರೂಪಿಸಲು ಅಪರಾಧಿಯ ಮೇಲೆ ವರ್ಗಾಯಿಸಲ್ಪಡುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

43. ಸದರಿ ಪ್ರಕರಣದಲ್ಲಿ, ಅನಧಿಕೃತ ಗೈರುಹಾಜರಿಯ ಆಪಾದನೆಯನ್ನು ಸಾಬೀತು ಪಡಿಸಲು ವಿಚಾರಣಾಧಿಕಾರಿಯ ಎದುರು ಯಾವುದೇ ಸ್ಪಷ್ಟ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ವಿಚಾರಣಾಧಿಕಾರಿಯ ಎದುರು ಮಂಡಿಸಿರುವ ರಜಾ ಅರ್ಜಿಯನ್ನು ವಿಚಾರಣಾಧಿಕಾರಿಯು ಪರಿಗಣಿಸಿರುವುದಿಲ್ಲ ಮತ್ತು ಮುಂದುವರೆದು, ರಜಾ ಅರ್ಜಿಯನ್ನು ತಿರಸ್ಕರಿಸಿರುವ ವಿಷಯವನ್ನು, ಕರ್ತವ್ಯಚ್ಯುತ ಕೆಲಸಗಾರನಿಗೆ ತಿಳಿಸಿರುವುದಿಲ್ಲವೆಂಬುದು ಒಪ್ಪಿತ ವಾಸ್ತವಾಂಶವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯು ನೀಡಿರುವ ಕಾರಣವು ಸಂದಿಗ್ಧತೆಗೆ ಕಾರಣವಾಗಿರುತ್ತದೆ.ವಾಸ್ತವವಾಗಿ, ಸಿ.ಎ.ಸಂಖ್ಯೆ:6765-66/2014 ರಲ್ಲಿ ನೀಡಿದ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, 11 ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

11. ಚೋಳನ್ ರೋಡ್ವೇಸ್ ಅ. ( ಈ ಹಿಂದೆ ಹೇಳಿದ) ನಲ್ಲಿ ಹೇಳಿದ ತತ್ವವನ್ನು ಅನ್ವಯಿಸಿ, ಬಸ್ಸು ಹಾಗೂ ಮೋಟಾರು ಕಾರಿಗೆ ಉಂಟಾದ ತೀವ್ರ ಸ್ವರೂಪದ ಹಾನಿಯನ್ನು ತೋರಿಸುವ ಸಾಕ್ಷ್ಯದ ಪ್ರಮಾಣೀಕೃತ ಮೌಲ್ಯ ಕುರಿತಂತೆ; ಹಲವಾರು ವ್ಯಕ್ತಿಗಳಿಗೆ ಮರಣಕ್ಕೆ ಕಾರಣವಾದ ಮಾರಣಾಂತಿಕ ಗಾಯಗಳ ಬಗೆಗೆ; ಹಾಗೂ ಪ್ರತ್ಯರ್ಜಿದಾರನು ಬಸ್ಸನ್ನು ಅಸಡ್ಡೆಯಿಂದ ಅಥವಾ ನಿರ್ಲಕ್ಷ್ಯದಿಂದ ಚಾಲನೆ ಮಾಡಿದನೆಂಬ ಊಹೆಯಿಂದ ಉದ್ಭವಿಸುವ ಪ್ರಭಾವಗಳ ಸ್ವರೂಪ-ಇವುಗಳನ್ನು ಪರಿಗಣಿಸಬೇಕಾದ ಅವಶ್ಯಕತೆಯಿರುತ್ತದೆ.ವಿಚಾರಣೆಯ ಅವಧಿಯಲ್ಲಿ ಇಲಾಖೆಯು ಮಂಡಿಸಿದ ವಸ್ತು ವಿಷಯವು, ಪ್ರತ್ಯರ್ಜಿದಾರನು ಆ ನಿರ್ದಿಷ್ಟ ಸಮಯದಲ್ಲಿ ವಾಹನವನ್ನು ಚಾಲನೆ ಮಾಡುತ್ತಿದ್ದು, ಆತನ ಅತೀ ವೇಗದ ಚಾಲನೆಯಿಂದ ಅಪಘಾತಕ್ಕೀಡಾದ ಎರಡೂ ವಾಹನಗಳು ತೀವ್ರವಾಗಿ ಹಾನಿಗೊಳಗಾಗಿ ಅವುಗಳಿಗೆ ಮಾರಣಾಂತಿಕ ಗಾಯಗಳಿಂದಾಗಿ ಸ್ಥಳದಲ್ಲೇ ಐವರು ಹಾಗೂ ಆಸ್ಪತ್ರೆಯಲ್ಲಿ ನಾಲ್ವರು ಹೀಗೆ ಒಟ್ಟು ಒಂಭತ್ತು ಜನ ಮೃತರಾದರೆಂದು ಧಾರುಣ ಘಟನೆಯ ವಾಸ್ತವಾಂಶವನ್ನು ಬೆಂಬಲಿಸುತ್ತದೆ.ಈ ವಾಸ್ತವಾಂಶಗಳು ಇಲಾಖೆಯು ಮಂಡಿಸಿದ ವಾಸ್ತವಾಂಶಗಳಿಂದ ಸುಸ್ಥಾಪಿತವಾಗುತ್ತವೆ.

44. ಮೇಲಿನದು, ವಿಚಾರಣಾಧಿಕಾರಿಯ ಎದುರು ಮಂಡಿಸಿದ ವಸ್ತು ವಿಷಯ ಸ್ವರೂಪದ ಸೂಚನೆಯಾಗಿರುತ್ತದೆ.ವಿಚಾರಣಾಧಿಕಾರಿಯ ಎದುರು ಮಂಡಿಸಿದ ಸಾಕ್ಷ್ಯಗಳು ಸ್ಪಷ್ಟವಾಗಿಯೂ, ಸಂದಿಗ್ಧವಾಗಿಯೂ ಕೂಡಿರುವುದರಿಂದ, ಸರ್ವೋಚ್ಚ ನ್ಯಾಯಾಲಯವು, ಸ್ವಯಂ ವಿಧಿತ ಸಿದ್ಧಾಂತವು ನೇರವಾಗಿ ಅನ್ವಯವಾಗತ್ತದೆಂಬ ತೀರ್ಪನ್ನು ನೀಡಿರುತ್ತದೆ.ಅದಕ್ಕೆ ವಿರುದ್ಧವಾಗಿ, ಪ್ರಸ್ತುತ ಪ್ರಕರಣದಲ್ಲಿ ಕಾರ್ಮಿಕ ನ್ಯಾಯಾಲಯವು, ಅನಧಿಕೃತ ಗೈರು ಹಾಜರಿಯ ವಾಸ್ತವಾಂಶವನ್ನು ಸಂದಿಗ್ಧತೆಯಿಂದ ನಿರೂಪಿಸುವಂಥ ಯಾವ ಸಾಕ್ಷ್ಯವೂ ಇರುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ.ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಹೀಗೆ ಮಾಡಿರುವುದೇ ಸರಿಯೆಂದು ಅಭಿಪ್ರಾಯಪಟ್ಟಿರುತ್ತದೆ.ವಿಚಾರಣಾಧಿಕಾರಿ ಎದುರು ಮಂಡಿಸಿರುವ ಸಾಕ್ಷ್ಯವು, ಅರ್ಜಿದಾರನು ಕೆಲಸದ ಹಂಚಿಕೆಗೆ ಸಂಬಂಧಿಸಿದಂತೆ ಕುಂದುಕೊರತೆಯನ್ನು ಡಿಪೋ ಮ್ಯಾನೇಜರ್ ವಿರುದ್ಧ ವ್ಯಕ್ತಪಡಿಸಿದ್ದನೋ ಅಂಥ ಡಿಪೋ ಮ್ಯಾನೇಜರ್ನ ನಿರೂಪಣೆಯೂ ಅದೇ ಆಗಿತ್ತು.ವಾಸ್ತವವಾಗಿ, ಈತನನ್ನು 10 ರಿಂದ 11 ಗ ಂ ಟೆಗಳ ಕಾಲದ ಕರ್ತವ್ಯಕ್ಕೆ ಹಕ್ಕುಳ್ಳಂಥ ಮಾರ್ಗಗಳ ಮೇಲೆ ನಿಯೋಜಿಸಲಾಗುತ್ತಿತ್ತು.ಕೆಲವೊಮ್ಮೆ, ಅತ್ಯಂತ ವಿರಳ ಜನ ವಸತಿಯಿರುವಂಥ ಯಾವುದೇ ನೈರ್ಮಲ್ಯವಿಲ್ಲದ ತೀರ ದೂರದ ಸ್ಥಳಗಳಲ್ಲಿ ಉಳಿದುಕೊಳ್ಳಲು ಒತ್ತಾಯಿಸಲಾಗುತ್ತಿತ್ತೆಂದೂ ಆಪಾದಿಸಿರುತ್ತಾರೆ.ಮುಂದುವರೆದು, ಸಂದಿಗ್ಧತೆಯು ರಜಾ ಅರ್ಜಿಯಿಂದ ಸುತ್ತುವರಿಯಲ್ಪಟ್ಟಿತ್ತು.ಅಲ್ಲದೆ, ಹೆಚ್ಚುವರಿ ಸಾಕ್ಷ್ಯ ಹಾಗೂ ಹೆಚ್ಚುವರಿ ಸಾಕ್ಷಿದಾರರನ್ನು ಅರ್ಜಿದಾರರ ಸಂದರ್ಭದಲ್ಲಿ ಮಾತ್ರ ಪರೀಕ್ಷಿಸಲಾಗಿರುತ್ತದೆಂಬುದನ್ನು ಗಮನಿಸಿಕೊಳ್ಳುವುದು ಮುಖ್ಯವಾಗುತ್ತದೆ.

45. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು 2014 4 ಎಸ್ಸಿಸಿ 108 ರಲ್ಲಿ ವರದಿಯಾದ ತೀರ್ಪನ್ನು ಅವಲಂಬಿಸಿರುತ್ತಾರೆ.ಸದರಿ ಪ್ರಕರಣದ ಒಳಾಂಶಗಳನ್ನು ಇಲ್ಲಿ ಒಳಗೊಂಡ ವಾಸ್ತವಾಂಶಗಳೊಂದಿಗೆ ತುಲನೆ ಮಾಡಿರುವುದಿಲ್ಲ.ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕರ್ತವ್ಯಚ್ಯುತ ಕೆಲಸಗಾರನ ಅನಧಿಕೃತ ಗೈರು ಹಾಜರಿಗೆ ವಿವರಣೆ ಹಾಗೂ ಕರ್ತವ್ಯದ ಮರು ಸೇರ್ಪಡೆಗೆ ಪುನರಾವರ್ತಿತವಾಗಿ ಜ್ಞಾಪನಗಳನ್ನು ಹಾಗೂ ನೆನಪಿನೋಲೆಗಳನ್ನು ಕಳುಹಿಸಿದರೂ ಉದ್ಯೋಗದಾತನಿಗೆ ವಿಷಯ ತಿಳಿಸದೆ ದೀರ್ಘಕಾಲೀನವಾಗಿ ಹಾಗೂ

ಅನಧಿಕೃತವಾಗಿ ಗೈರು ಹಾಜರಾದುದನ್ನು ಒಳಗೊಂಡ ಪ್ರಕರಣದೊಂದಿಗೆ ವ್ಯವಹರಿಸಿರುತ್ತದೆ.ಸರ್ವೋಚ್ಚ ನ್ಯಾಯಾಲಯವು, 01.04.1997 ರಂದು ಅಂದರೆ 8 ತಿಂಗಳುಗಳ ಕಾಲ ವಿಳಂಬ ಮಾಡಿ ಸಲ್ಲಿಸಿದ ವೈದ್ಯಕೀಯ ಪ್ರಮಾಣಪತ್ರವು, ಪ್ರತ್ಯರ್ಜಿದಾರನು 28.08.1995 ರಿಂದ ಸ್ವತಃ ಅನಧಿಕೃತವಾಗಿ ಗೈರುಹಾಜರಾಗಿರುತ್ತಾನೆಂಬ ಪ್ರತಿರೋಧಿಸಲಾಗದ ತೀರ್ಮಾನಕ್ಕೆ ಬರಲಾಗಿರುತ್ತದೆಂದೂ ಅಭಿಪ್ರಾಯಪಟ್ಟಿರುತ್ತದೆ.ಪ್ರಸ್ತುತ ಪ್ರಕರಣದಲ್ಲಿ, ವಿಚಾರಣಾಧಿಕಾರಿಯು ವಿವರಿಸದಂಥ ಪ್ರಶ್ನಾರ್ಥಕ ವಿಷಯವೆಂದರೆ ನಿಶಾನೆ ಎಂ .2 ಎಂದು ಇದರ ಮುಂದೆ ಮಂಡಿಸಿರುವ ರಜಾ ಅರ್ಜಿಯಾಗಿರುತ್ತದೆ.ರಜೆಯನ್ನು ಕೋರುವುದಕ್ಕೆ ಸಂಬಂಧಿಸಿದಂತೆ ಹೇಳಲಾದ ಕಾರಣಗಳಲ್ಲಿ ಸುಳ್ಳನ್ನು ಸಾಬೀತುಮಾಡಲು ವಿಚಾರಣಾಧಿಕಾರಿಯ ಎದುರು ನಿಯೋಜಕನು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.ಹಾಗಾಗಿ, ಮೇಲಿನ ನಿರ್ಣಯದಲ್ಲಿ ಭರವಸೆಯು ಮೂಡಿರುವುದಿಲ್ಲ.ಅದರೊಂದಿಗೆ, ನಿಯೋಜಕನು ಸಾವಿರಾರು ಪ್ರಕರಣಗಳಲ್ಲಿ ಸರಳವಾದ ದಂಡನೆಗಳೊಂದಿಗೆ 150 ರಿಂದ 200 ದಿನಗಳ ವರೆಗಿನ ಅವಧಿಯಷ್ಟು ಅನಧಿಕೃತ ಗೈರು ಹಾಜರಿಯನ್ನು ಮನ್ನಾ ಮಾಡಿರುತ್ತದೆ.ನಿಯೋಜಕನು ಅನಧಿಕೃತ ಗೈರು ಹಾಜರಿಯೂ ಒಳಗೊಂಡಂತೆ ಹಲವಾರು ರಿಟ್ ಅರ್ಜಿಗಳನ್ನು ರಾಜಿ ಮಾಡಿಕೊಳ್ಳಲು ಒಪ್ಪಿಕೊಂಡಿರುತ್ತದೆಂಬುದು ವಾಸ್ತವಾಂಶವಾಗಿದ್ದು, ಅದರಲ್ಲಿ ಕೆಲಸಗಾರನು ಮಜೂರಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದಂತೆ ತನ್ನ ಕ್ಲೇಮನ್ನು ಬಿಟ್ಟುಕೊಡಲು ಒಪ್ಪಿಕೊಂಡು, ಕೆಲಸಕ್ಕೆ ಪುನಃ ಸೇರಿಕೊಳ್ಳುವುದಕ್ಕೆ ಸಂಬಂಧಿಸಿದ ಅವರ ಕ್ಲೇಮನ್ನು ನಿರ್ಬಂಧಿಸಲಾಗಿರುತ್ತದೆ.ಹಾಗಾಗಿ, ದಂಡನೆಯ ಅನುಪಾತಕ್ಕೆ ಸಂಬಂಧಿಸಿದಂತೆ ಕಾರ್ಮಿಕ ನ್ಯಾಯಾಲಯದ ಅಭಿಪ್ರಾಯದಲ್ಲಿ ಯಾವುದೇ ದೋಷ ಕಂಡುಬಂದಿರುವುದಿಲ್ಲ.

46. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯವು ನೀಡಿದ ಹಲವಾರು ನಿರ್ಣಯಗಳನ್ನು ಉದಾಹರಿಸಿದ್ದು, ಇವುಗಳು ಸರ್ವೋಚ್ಚ ಚ ನ್ಯಾಯಾಲಯದ ಮೇಲೆ ಪ್ರಸ್ತಾಪಿಸಿದಂಥ ನಿರ್ಣಯಗಳನ್ನು ಅನುಸರಿಸಿ ನೀಡಿದ ತೀರ್ಪಾಗಿರುತ್ತದೆ.

47. ಕಾರ್ಮಿಕ ನ್ಯಾಯಾಲಯವು ವಿಚಾರಣಾಧಿಕಾರಿಯ ಎದುರು ಲಭ್ಯವಾದಂಥ ಸಾಕ್ಷ್ಯವನ್ನು ಹೊರತುಪಡಿಸಿದ ಸಾಕ್ಷ್ಯವನ್ನು ಉದಾಹರಿಸಿ ದೋಷವೆಸಗಿದೆಯೆಂಬುದು ಮೂಲ ವಾದವಾಗಿರುತ್ತದೆ.ಈ ವಾದಕ್ಕೆ ಪೂರಕವಾಗಿ ವರದಿಯಾದ ಮಾರ್ಟಿನ್ ಬರ್ನ್ ಅ -ವಿರುದ್ಧ-ಆರ್.ಎನ್. ಬ್ಯಾನರ್ಜಿಯವರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠವು ವಿಧಿಸಿದ ಕಾನೂನಿನಲ್ಲಿ ಉದಾಹರಿಸಿರುತ್ತದೆ.48. ಈಕೆ 22 ನೇ ಪ್ಯಾರಾದಡೆ ಈ ನ್ಯಾಯಾಲಯದ ಗಮನವನ್ನು ಸೆಳೆದಿದ್ದು, ಅದು ಈ ಮುಂದಿನಂತಿರುತ್ತದೆ:

22. ಅಧಿನಿಯಮದ 22 ನೇ ಪ್ರಕರಣದಡಿಯಲ್ಲಿ ಕಾರ್ಮಿಕ ಅಪೀಲು ನ್ಯಾಯಾಧಿಕರಣದ ಮುಂದಿರುವ ವಿಚಾರಣೆಯ ಸ್ವರೂಪ ಹಾಗೂ ವ್ಯಾಪ್ತಿಯು ಅಥರ್ಟನ್ ವೆಸ್ಟ್ ಅಂಡ್ ಕಂ.ಲಿ ವಿರುದ್ಧ ಸುತಿ ಮಿಲ್ ಮದೂರ್ ಯೂನಿಯನ್ 1953 ಎಸ್ಸಿಆರ್ 780, (ಎಐಆರ್ 1953 ಎಸ್ಸಿ 241) (ಸಿ), ದ ಅಟೋಮೊಬೈಲ್ ಪ್ರಾಡಕ್ಟ್ ನಿಟ ಆಫ್ ಇಂಡಿಯಾ ಲಿ. -ವಿರುದ್ಧ-ರುಕ್ಮಾಜಿ ಬಾಲಾ 1955-1 ಎಸ್ಆರ್ 1241 (ಎಸ್) ಎಐಆರ್ 1955 ಎಸ್ 258) (ಡಿ) ಮತ್ತು ಲಕ್ಷ್ಮೀ ದೇವಿ ಶುಗರ್ ಮಿಲ್ಸ್ ಲಿಮಿಟೆಡ್ -ವಿರುದ್ಧ ರಾಮ್ ಸರೂಪ್, 1956 ಎಸ್ಸಿಆರ್ 916:(ಎಸ್) ಎಐಆರ್ 1957 ಎಸ್ 82 ( 3) ಪ್ರಕರಣಗಳಲ್ಲಿ ಈ ನ್ಯಾಯಾಲಯವು ನೀಡಿರುವ ನಿರ್ಣಯಗಳ ವಸ್ತು ವಿಷಯವಾಗಿದೆ.ಈ ಹಿಂದೆ ನಮೂದಿಸಿದ ಪ್ರಕರಣದಲ್ಲಿ ಈ ನ್ಯಾಯಾಲಯವು, ಅಂಥ ವಿಚಾರಣೆಯನ್ನು ನಡೆಸಿದ ತತ್ವಗಳನ್ನು ಅಡಕಗೊಳಿಸಿ ವಿಧಿಸಿರುತ್ತದೆ.ಪ್ಯಾರಾ 935 (ಎಸ್ಸಿಆರ್); (ಎಐಆರ್ನ 93-94 ಪ್ಯಾರಾಗಳಲ್ಲಿ) ಈ ಮುಂದಿನಂತೆ ಅಭಿಪ್ರಾಯ ಪಡಲಾಗಿರುತ್ತದೆ:

“ನಿಯೋಜಕ ಹಾಗೂ ಕೆಲಸಗಾರನ ನಡುವೆ ಉದ್ಭವವಾಗುವ ಯಾವುದೇ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದಂತೆ ಆ ನಿರ್ದಿಷ್ಟ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಧಿಕರಣವು ಅಧಿ ವಿಚಾರಣೆ ಮಾಡುವಂತಿಲ್ಲ.ಆದರೆ ಕೆಲಸಗಾರನಿಗೆ ಬಾಧಕವಾಗುವಂಥ ಉದ್ಯೋಗದ ಷರತ್ತುಗಳನ್ನು ಮಾರ್ಪಾಡುಗೊಳಿಸುವ ವಿಷಯದಲ್ಲಿ ನಿಯೋಜಕನ ಮೇಲೆ ವಿಧಿಸಿದ್ದ ನಿಷೇಧ ಅಥವಾ ಅನ್ಯಥಾ ನಡಾವಳಿಗಳು ಇತ್ಯರ್ಥದಲ್ಲಿರುವ ಅವದಿ ಂ ಲ್ಲಿ ಅವುಗಳನ್ನು ಅ ಂ ತ್ಯಗೊಳಿಸಬೇಕೆಂದು ಉಲ್ಲೇಖಿಸಿದ್ದ ನಿಷೇಧವನ್ನು ಪರಿಗಣಿಸಬೇಕಾಗುತ್ತದೆ.ಅಂಥ ನಿಷೇಧವನ್ನು ಅಂತ್ಯಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯೋಜಕನು ಮೊದಲ ನೋಟಕ್ಕೆ ಸಮ್ಮತವಾಗುವ ವಾದವನ್ನು ಮಾಡಬೇಕಾಗುತ್ತದೆ ಹಾಗೂ

ನ್ಯಾಯಾಧಿಕರಣವು ಹೊಂದಿರುವಂಥ ಒಂದೇ ಅಧಿಕಾರ ವ್ಯಾಪ್ತಿಯೆಂದರೆ ಅಂಥ ಅನುಮತಿ ನೀಡುವುದು ಅಥವಾ ಅದನ್ನು ನಿರಾಕರಿಸುವುದಾಗಿದೆ.ಪರಂತು ನಿಯೋಜಕನು ದುರ್ಭಾವನೆಯಿಂದ ವರ್ತಿಸಬಾರದಾಗಿರುತ್ತದೆ ಅಥವಾ ಯಾವುದೇ ಅನುಚಿತ ಕಾರ್ಯವನ್ನು ಅಥವಾ ಪೀಡನೆ ೦ ತನು ಪುನ:ಮಾಡಬಾರದಾಗಿರುತ್ತದೆ.

( ಈ ನ್ಯಾಯಾಲಯವು ಇದಕ್ಕೆ ಒತ್ತು ನೀಡಿರುತ್ತದೆ)

ಅದರಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನದೇ ತೀರ್ಪುಗಳ ಸರಣಿಯನ್ನು ಚ ನಿರ್ದಿಷ್ಟವಾಗಿ ಎಐಆರ್ 1957 ಎಸ್ 82 ರಲ್ಲಿ ವರದಿಯಾದ ತೀರ್ಪನ್ನು ಅನುಮೋದನೆಯೊಂದಿಗೆ ಮಂಡಿಸಿರುತ್ತದೆ ಹಾಗೂ ಅದರಲ್ಲಿ ನೀಡಿರುವ ತೀರ್ಪನ್ನು ಈ ಮುಂದಿನಂತೆ ಓದಲಾಗಿರುತ್ತದೆ:

"ಪರಂತು ನಿಯೋಜಕನು, ದುರ್ಭಾವನೆಯಿಂದ ವರ್ತಿಸಬಾರದು ಅಥವಾ ಯಾವುದೇ ಅನುಚಿತ ಕಾರ್ಯವನ್ನು ಅಥವಾ ಪೀಡನೆಯನ್ನು ಪುನಃ ಮಾಡಬಾರದಾಗಿರುತ್ತದೆ.23 ಹಾಗೂ 25 ನೇ ಪ್ಯಾರಾಗಳ ಒಳಾಂಶಗಳನ್ನು ಉದ್ಧರಿಸುವುದು ಸಮುಚಿತವಾದುದಾಗಿರುತ್ತದೆ ಹಾಗೂ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವು ಅಪೀಲುದಾರನು ವಜಾಗೊಳಿಸಿರುವುದಕ್ಕೆ ಸಂಬಂಧಿಸಿದಂತೆ ಮೊದಲ ನೋಟಕ್ಕೆ ಸಮ್ಮತವಾಗುವ ವಾದವನ್ನು ಮಾಡುವ ಮೂಲಕ ಇದರ ಮುಂದೆ ಸಲ್ಲಿಸಿದ ವಸ್ತು ವಿಷಯವನ್ನು ರುಜುವಾತುಪಡಿಸುವ ಭಾರವನ್ನು ಸ್ವತಃ ಹೊತ್ತುಕೊಳ್ಳುವಂಥ ಕಾರ್ಮಿಕ ಅಪೀಲು ನ್ಯಾಯಾಧಿಕರಣದ ದೃಷ್ಟಿಕೋನವನ್ನು ಸಮರ್ಥಿಸಿರುತ್ತದೆ.

23.ಆದ್ದರಿಂದ ನಾವು, ಪ್ರಸ್ತುತ ಪ್ರಕರಣದಲ್ಲಿ ಪ್ರತ್ಯರ್ಜಿದಾರನನ್ನು ಸೇವೆಯಿಂದ ವಜಾ ಮಾಡುವುದಕ್ಕೆ ಸಂಬಂಧಿಸಿದಂತೆ ಅಪೀಲುದಾರನು ರೂಪಿಸಿದ ಮೊದಲ ನೋಟಕ್ಕೆ ಸಮ್ಮತವಾಗುವ ವಾದವನ್ನು ಹಾಗೂ ಪ್ರತ್ಯರ್ಜಿದಾರನ ಸೇವೆಯ ದಿನಾಂಕದಂದು ಅಪೀಲುದಾರನು ನೀಡಿರುವ ನೋಟೀಸು ಯಾವುದೇ ಅನುಚಿತ ಕಾರ್ಮಿಕ ವಿರೋಧಿ ಕ್ರಮ ಅಥವಾ ಪೀಡನೆಯಾಗಿರುತ್ತದೆಯೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ.

25. ಅಪೀಲುದಾರನು, ಪ್ರತ್ಯರ್ಜಿದಾರನನ್ನು ಸೇವೆಯಿಂದ ವಜಾ ಮಾಡುವುದಕ್ಕೆ ಸಂಬಂಧಿಸಿದಂತೆ ಮೊದಲ ನೋಟಕ್ಕೆ ಸಮ್ಮತವಾದ ವಾದದಿಂದಲೇ ಸ್ವತಃ ನಿರ್ಧರಿಸಲು ಸಾಕಷ್ಟಾಗಿತ್ತೆಂದು ಈ ಸಂದರ್ಭವು ಪರಿಗಣಿತವಾಗಿರುತ್ತದೆ. ಪ್ರತ್ಯರ್ಜಿದಾರನ ಮೇಲೆ ಆರೋಪಪಟ್ಟಿ ಸಲ್ಲಿಸಲು ಹಾಗೂ ಆತನ ಕಾರ್ಯಕ್ಷಮತೆ ಹಾಗೂ ನಡತೆ ಕುರಿತಂತೆ ಔಪಚಾರಿಕ ವಿಚಾರಣೆ ಆರಂಭಿಸಲು ಅಪೀಲುದಾರ ಸಂಸ್ಥೆಯು ಮುಕ್ತವಾಗಿಯೇ ಇತ್ತು. ಹಾಗೆ ಮಾಡಲಾಗಿದ್ದಲ್ಲಿ, ಅಂಥ ಔಪಚಾರಿಕ ವಿಚಾರಣೆಯನ್ನು ನಡೆಸಿದ ತರುವಾಯ ಅರ್ಜಿದಾರನು ಸಂಸ್ಥೆಯ, ಪ್ರತ್ಯರ್ಜಿದಾರನನ್ನು ಆತನ ವಿರುದ್ಧ ವಿಧಿಸಿದ ಆರೋಪಗಳ ತಪ್ಪಿತಸ್ಥನೆಂದು ತೀರ್ಮಾನಕ್ಕೆ ಬಂದ ತರುವಾಯ ಆತನನ್ನು ಸೇವೆಯಿಂದ ವಜಾ ಮಾಡಲು ನಿರ್ಧರಿಸಬೇಕಾಗಿದ್ದು, ಇದರಲ್ಲಿ ನ್ಯಾಯಾಧಿಕರಣವು ಮಧ್ಯೆ ಪ್ರವೇಶಿಸುತ್ತಲೇ ಇರಲಿಲ್ಲ.ಪ್ರತ್ಯರ್ಜಿದಾರನನ್ನು ಸೇವೆಯಿಂದ ವಜಾ ಮಾಡುವುದಕ್ಕೆ ಸಂಬಂಧಿಸಿದಂತೆ ಮೊದಲ ನೋಟಕ್ಕೆ ಸಮ್ಮತವಾಗುವ ವಾದದಿಂದಲೇ ಇದನ್ನು ಮನಗಂಡು, ಅಪೀಲುದಾರ ಸಂಸ್ಥೆಗೆ ನೌಕರನನ್ನು ವಜಾ ಮಾಡಲು ಅನುಮತಿ ನೀಡಲಾಗುತ್ತಿತ್ತು.ದುರಾದೃಷ್ಟವಶಾತ್, ಅಪೀಲುದಾರರಿಗೆ, ಪ್ರತ್ಯರ್ಜಿದಾರರ ಕಾರ್ಯ ಹಾಗೂ ನಡತೆಯು ಅತೃಪ್ತಿದಾಯಕವಾಗಿದ್ದರಿಂದ ಆತನು ಸೇವೆಯಲ್ಲಿ ಉಳಿದುಕೊಳ್ಳಲು ಸಮರ್ಥವಾಗಿಲ್ಲವೆಂಬ ತೀರ್ಮಾನವನ್ನು ಸಮರ್ಥಿಸಿಕೊಂಡಿರುತ್ತದೆ.ಅಪೀಲುದಾರ ನಿಗಮವು ಮೇಲೆ ಸೂಚಿಸಿದಂಥ ಸ್ವರೂಪದ ಔಪಚಾರಿಕ ವಿಚಾರಣೆಯನ್ನು ನಡೆಸಿರುವುದಿಲ್ಲ ಹಾಗೂ ಆತನ ವಿರುದ್ಧ ವಿಧಿಸಿದ ಆರೋಪಗಳ ವಿಷಯದಲ್ಲಿ ಮಾತನಾಡಲು ಪ್ರತ್ಯರ್ಜಿದಾರನಿಗೆ ಅವಕಾಶವನ್ನು ನೀಡಿರುವುದಿಲ್ಲ.ಆದ್ದರಿಂದ ಕಾರ್ಮಿಕ ಅಪೀಲು ನ್ಯಾಯಾಧಿಕರಣವು, ತನ್ನ ಮುಂದೆ ಸಲ್ಲಿಸಿದ ಸಾಕ್ಷ್ಯದ ಆಧಾರದ ಮೇಲೆ ಅಪೀಲುದಾರನು ಪ್ರತ್ಯರ್ಜಿದಾರನನ್ನು ಸೇವೆಯಿಂದ ವಜಾ ಮಾಡಿದ ಮೊದಲ ನೋಟಕ್ಕೆ ಸಮ್ಮತವಾದ ವಾದವು ಸರಿಯಾದುದೆ ಅಥವಾ ಇಲ್ಲವೆ ಎಂದು ನಿರ್ಣಯಿಸುವ ಹೊಣೆಯನ್ನು ಹೊತ್ತಿಕೊಂಡಿರುವುದು ಸರಿಯಾದ ಕ್ರಮವೇ ಆಗಿರುತ್ತದೆ.

49. ಮತ್ತೂ ಮುಂದುವರೆದು, ದಾಖಲೆ ಮೇಲಿನ ವಾಸ್ತವಿಕ ವಸ್ತು ವಿಷಯವನ್ನು ನಿರ್ಧರಿಸಿದ ತರುವಾಯ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

" ಆದ್ದರಿಂದ, ಈ ಅವಶ್ಯಕ ಒಳಾಂಶಗಳು ಬೇಕಾದಲ್ಲಿ, ಕಾರ್ಮಿಕ ಅಪೀಲು ನ್ಯಾಯಾಧಿಕರಣದ ಎದುರು ಅಪೀಲುದಾರನು ನೀಡಿದ ಸಾಕ್ಷ್ಯವು ಪ್ರತ್ಯರ್ಜಿದಾರನನ್ನು ಸೇವೆಯಿಂದ ವಜಾ ಮಾಡಿರುವುದಕ್ಕೆ

ಸಂಬಂಧಿಸಿದಂತೆ ಮೊದಲ ನೋಟಕ್ಕೆ ಸಾಬೀತಾಗುವ ವಾದವನ್ನು ರುಜುವಾತು ಪಡಿಸುವುದು ಸಾಕಷ್ಟಾಗುತ್ತದೆಂದು ಹೇಳಲಾಗುವುದಿಲ್ಲ ".

ಪ್ರಸ್ತುತ ಈ ನ್ಯಾಯಾಲಯವು, ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿರುವ ಚ ತತ್ವಗಳನ್ನು ಅನ್ವಯಿಸಲು ವಿಚಾರಣೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಪಡಿಸಿದಂತಹ ಮಾನದಂಡಗಳನ್ನು ಅತಿಕ್ರಮಿಸುವ ಮೂಲಕ ಕಾರ್ಮಿಕ ನ್ಯಾಯಾಲಯವು ತಪ್ಪನ್ನು ಎಸಗಿದೆಯೇ ಎಂಬುದನ್ನು ಪರೀಕ್ಷಿಸಲು ಮುಂದುವರೆದಿದೆ.ಸರ್ವೋಚ್ಚ ನ್ಯಾಯಾಲಯವು ಎಐಆರ್ 1957 ಎಸ್ 82 ಚ ರಲ್ಲಿ ವಿಧಿಸಿದ ಕಾನೂನಿನ ಅನುಮೋದನೆಯನ್ನು ಉದ್ಧರಿಸಿರುವುದು ಮಾತ್ರವಲ್ಲದೆ, ಮುಂದುವರೆದು, ಸೇವೆಗಳನ್ನು ವಜಾಗೊಳಿಸುವಲ್ಲಿ ನಿಯೋಜಕನ ಕ್ರಮವು ಯಾವುದೇ ರೀತಿಯಲ್ಲಿ ಅನುಚಿತವಾಗಿ ಕಾರ್ಮಿಕರನ್ನು ನಡೆಸಿಕೊಳ್ಳುವುದು ಅಥವಾ ಬಾಧಿತನನ್ನಾಗಿಸುವಂತೆ ಮಾಡಿದ್ದಲ್ಲಿ ಸರ್ವೋಚ್ಚ ನ್ಯಾಯಾಲಯವೇ ಸ್ವತಃ ಈ ವಿಚಾರವನ್ನು ನಿರ್ಧರಿಸಲು ಕೈಗೆತ್ತಿಕೊಳ್ಳಬೇಕಾಗಿತ್ತು.

50. ಮೇಲಿನದರಿಂದ, ನ್ಯಾಯಾಧಿಕರಣವು ತಾನು ಕೈಗೊಳ್ಳುವ ಕ್ರಮವು ಅನುಚಿತವಾಗಿ ಕಾರ್ಮಿಕರನ್ನು ನಡೆಸಿಕೊಳ್ಳುವುದು ಅಥವಾ ಬಾಧಿತನನ್ನಾಗಿಸುವುದು ಅಥವಾ ದುರ್ಭಾವನೆಯಿಂದ ನಡೆಸಿಕೊಳ್ಳಲಾಗಿದೆಯೆಂದು ಅಭಿಪ್ರಾಯ ಪಡುವಂತಾದಲ್ಲಿ, ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಪಡಿಸಿರುವ ಮಾನದಂಡಗಳನ್ನು ಅತಿಕ್ರಮಿಸುವ ಮೂಲಕ ಪ್ರಕರಣವನ್ನು ವಿಚಾರಣೆ ನಡೆಸಲು ಮುಂದಾಗಿರಬಹುದೆಂಬ ಅನಿವಾರ್ಯ ತೀರ್ಮಾನಕ್ಕೆ ಬರಬೇಕಾಗುತ್ತದೆ.

51. ಪ್ರಸ್ತುತ ಪ್ರಕರಣದಲ್ಲಿ, ಕಾರ್ಮಿಕ ನ್ಯಾಯಾಲಯವು, ವಿಚಾರಣಾಧಿಕಾರಿಯ ಮುಂದಿರುವ ವಸ್ತು ವಿಷಯವನ್ನು ಮಾತ್ರ ಪರಿಗಣಿಸದೇ, ಅರ್ಜಿದಾರ ಸಂಸ್ಥೆಯೇ ತನ್ನ ಸರಣಿ ಅರ್ಜಿಗಳಿಗೆ ಪೂರಕವಾಗಿ ಅರ್ಜಿದಾರರು ಇದರ ಮುಂದೆ ಸಲ್ಲಿಸಿದ ಎಲ್ಲಾ ವಸ್ತುವಿಷಯವನ್ನು ಪರಿಗಣಿಸಿದೆ.ವಸ್ತು ವಿಷಯವನ್ನು ಪರಿಶೀಲಿಸಿದ ತರುವಾಯ ನ್ಯಾಯಾಧಿಕರಣವು, ವಿಚಾರಣಾಧಿಕಾರಿಯ ರಜಾ ಅರ್ಜಿ ಕುರಿತ ವಿವೇಚನೆಯು ಅಪೇಕ್ಷಿತ ರೀತಿಯನ್ನು ಮೀರಿದ್ದು, ಇದು ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಗೆ ಕಾರಣವಾಗುತ್ತದೆ ಎಂಬ ಅಭಿಪ್ರಾಯ ತಳೆದು ಆ ತೀಮಾನಕ್ಕೆ ಬರಲು ಇದು ಎಐಆರ್ 1985 ಎಸ್ಸಿ 1121 ರಲ್ಲಿ ವರದಿಯಾದ ನಿರ್ಣಯವನ್ನು ಉದಾಹರಿಸಿರುತ್ತದೆ.ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು, ವಿಚಾರಣಾ ವರದಿಯು ಅರೆ ನ್ಯಾಯಿಕ ವಿಚಾರಣೆಯಾಗಿದ್ದು, ಅದು ತೀರ್ಮಾನಕ್ಕೆ ಸಂಬಂಧಿಸಿದ ಕಾರಣಗಳನ್ನು ಹೇಳಬೇಕಾಗುತ್ತದೆ.ಇದು ವಿಚಾರಣಾಧಿ ಕಾರಿಯ ಅಧಿಕಾರ ಬಲದ ಹೇಳಿಕೆಯಾಗಿರುವುದಿಲ್ಲ.ತೀರ್ಮಾನವು ಸಕಾರಣಯುತ ಕಾರಣಗಳಿಂದ ಬೆಂಬಲಿತವಾಗಿರುತ್ತದೆಂಬ ದೃಷ್ಟಿಯಲ್ಲಿ ಇದು ಸಕಾರಣಯುತ ಆದೇಶವಾಗಿರುತ್ತದೆ.ವಿಚಾರಣಾ ವರದಿಯ ಪ್ರತಿಯು, ರಿಟ್ ಅರ್ಜಿಗೆ ಅನುಬಂಧ-ಬಿ ಎಂದು ಹಾಜರುಪಡಿಸಲಾಗಿರುತ್ತದೆ.ವಿಚಾರಣಾ ವರದಿಯ ಪರಿಶೀಲನೆಯಿಂದ ಈ ನ್ಯಾಯಾಲಯವು, ವಿಚಾರಣಾಧಿಕಾರಿಗಳು, ರಜಾ ಅರ್ಜಿಯನ್ನುದಿನಾಂಕ: 24.8.2005 ರಂದು ವಿಳಂಬವಾಗಿ ಸ್ವೀಕರಿಸಲಾಯಿತೆಂಬ ಹಾಗೂ ಉದ್ಯೋಗಿಯು ಪೂರ್ವಾನುಮೋದನೆಯೊಂದಿಗೆ ಮಾತ್ರ ರಜೆ ಪಡೆಯಬೇಕಿತ್ತೆಂಬ ವಾದವನ್ನು ಮಾತ್ರ ಆಡಳಿತ ಮಂಡಳಿ ಮರು ಪರಿಶೀಲನೆ ಮಾಡಿರುತ್ತದೆ ಹಾಗೂ ಇಲ್ಲಿನ ಪ್ರತ್ಯರ್ಜಿದಾರ ಉದ್ಯೋಗಿಗೆ ಯಾವುದೇ ನೆರವು ನೀಡದೆ ಆತನ ನಿವೇದನೆಯನ್ನು ತಿರಸ್ಕರಿಸಲು ಮುಂದಾಗಿರುತ್ತದೆ.ವಾಸ್ತವವಾಗಿ ಆಡಳಿತ ಮಂಡಳಿಯ ಸಾಕ್ಷ್ಯದ ಹೇಳಿಕೆಯನ್ನು ಹೊರತುಪಡಿಸಿದಂತೆ ರಜಾ ಅರ್ಜಿಯನ್ನು ವಿಳಂಬವಾಗಿ ಸಲ್ಲಿಸಲಾಗಿದೆಯೆಂಬ ತೀರ್ಮಾನಕ್ಕೆ ಬರಲು ವಿಚಾರಣಾಧಿಕಾರಿಗಳ ಪರ ಯಾವುದೇ ವಸ್ತು ನಿಷ್ಠ ಸಾಕ್ಷ್ಯವು ಇರುವುದಿಲ್ಲ.

52. ರಜಾ ಅರ್ಜಿಯನ್ನು ವಿಳಂಬವಾಗಿ ಸ್ವೀಕರಿಸಲಾಗಿರುತ್ತದೆ ಎಂದಾಗಲೀ ಇಲ್ಲವೇ ಯಾವುದೇ ರಜೆಯನ್ನು ಪೂರ್ವಾನುಮೋದನೆಯಿಲ್ಲದೆ ಪಡೆಯಲಾಗುವುದಿಲ್ಲವೆಂಬ ವಾದವನ್ನು ಒಪ್ಪಿಕೊಳ್ಳುವಂತೆ ಯಾವುದೇ ನಿಬಂಧನೆಗಳು ಅಥವಾ ನಿಯಮಗಳ ಉಪಬಂಧಗಳನ್ನು ಹಾಜರುಪಡಿಸಿರುತ್ತೇನೆಂಬ ತೀರ್ಮಾನಕ್ಕೆ ಬರುವಂತೆ ಯಾವ ಸಾಕ್ಷ್ಯವನ್ನು ವಿಚಾರಣಾಧಿಕಾರಿಗಳು ಪರಿಶೀಲಿಸಿರುವುದಿಲ್ಲ.ಕ್ವಚಿತ್ತಾದ ತರ್ಕವು ವ್ಯತಿರಿಕ್ತವಾಗಿರುತ್ತದೆ.ಅದರೊಂದಿಗೆ, ಸದರಿ ತರ್ಕವು ಅದನ್ನು ನಿರೂಪಿಸುವಂಥ ದೂರದೃಷ್ಟಿಯನ್ನು ಹೊಂದಿರುವುದಿಲ್ಲ.ಅನಾರೋಗ್ಯದ ವ್ಯಕ್ತಿಯು ರಜೆ ಮಂಜೂರಾತಿ ಪಡೆಯಲು ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ತರುವಾಯ ಆಸ್ಪತ್ರೆಗೆ ತೆರಳಬೇಕೆಂದು ನಿರೀಕ್ಷಿಸುವುದು ಕಾರ್ಯಸಾಧ್ಯವಾದುದಾಗಿರುವುದಿಲ್ಲ.ಒಂದು ವೇಳೆ ರಜೆಯ ಪೂರ್ವಾನುಮೋದನೆ ಪಡೆದುಕೊಳ್ಳಲೇ

ಬೇಕಾಗಿರುವುದು ನಿಯಮವೆಂದು ಅದನ್ನು ಪಾಲಿಸಲೇಬೇಕೆಂಬ ತರ್ಕವನ್ನು ಒಪ್ಪಿಕೊಂಡಲ್ಲಿ, ಒಂದು ವೇಳೆ ಉದ್ಯೋಗಿಗೆ ತೀವ್ರತರವಾದ ಅಪಘಾತವಾಗಿಯೋ ಅಥವಾ ತೀವ್ರತರದ ಕಾಯಿಲೆಯುಂಟಾಗಿಯೋ ಅಸ್ವಸ್ಥನಾದರೆ, ಆತ ಆಸ್ಪತ್ರೆಗೆ ಹೋಗುವ ಮೊದಲು, ಕೆಲಸದ ನಿಯೋಜಕನಲ್ಲಿಗೆ ಬಂದು ರಜೆ ಮಂಜೂರಾತಿ ಪಡೆದುಕೊಂಡು ತರುವಾಯ ಚಿಕಿತ್ಸೆಗೆ ತೆರಳಬೇಕೆಂದು ವಾದಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.ಈ ವಾದವು ಅಸಂಗತವಾದುದಾಗಿದ್ದು, ಇದಕ್ಕೆ ಪೂರಕವಾಗಿ ಯಾವುದೇ ನಿಬಂಧನೆ ಅಥವಾ ನಿಯಮಗಳ ಉಪಬಂಧಗಳು ಇರುವುದಿಲ್ಲ.ಹಾಗಾಗಿ, ಈ ನ್ಯಾಯಾಲಯವು, ಸಾಕ್ಷ್ಯವನ್ನು ನಿರ್ದಿಷ್ಟವಾಗಿ (ನಿಶಾನೆ ಎಂ .2/ನಿಶಾನೆ ಎ 3) ಗಳನ್ನು ಪರಿಗಣಿಸುವುದು ವ್ಯತಿರಿಕ್ತತೆಯಿಂದ ನಿರರ್ಥಕವಾಗುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಜೊತೆಗೆ ಅನಿಲ್ ಕುಮಾರ್ -ವಿರುದ್ಧ-ಅಧ್ಯಕ್ಷಾಧಿಕಾರಿ ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ, ಕಾರಣಗಳನ್ನು ದಾಖಲಿಸುವ ವಿಚಾರಣಾಧಿಕಾರಿಗಳ ಬದ್ಧತೆಯ ಕರ್ತವ್ಯವಾಗಿರುತ್ತದೆ ಹಾಗೂ ಕೇವಲ ಅಧಿಕಾರ ಬಲದ ಹೇಳಿಕೆಯು, ತಾರ್ಕಿಕವಾಗಿ ಸರಿಸಮವಾಗುವುದಿಲ್ಲವಾದ್ದರಿಂದ ಕಾನೂನಿನ ಅಗತ್ಯತೆಗಳನ್ನು ಪರ್ಯಾಪ್ತಗೊಳಿಸಲಾಗುವುದಿಲ್ಲ.

53. ಅದರೊಂದಿಗೆ, ರಜಾ ಅರ್ಜಿಯಲ್ಲಿ ಹೇಳಿರುವ ಅನಾರೋಗ್ಯದ ಕಾರಣವನ್ನು ನಿಯೋಜಕರಾಗಲೀ ಇಲ್ಲವೇ, ರಜಾ ಅರ್ಜಿಯಲ್ಲಿ ಹೇಳಿರುವ ಅನಾರೋಗ್ಯದ ಕಾರಣವು ಸುಳ್ಳು ಎಂದು ಇಲ್ಲವೇ ವಿವಾದಾಂಶವನ್ನು ರೂಪಿಸಲಾಗಿದೆಯೆಂದು ವಿಚಾರಣಾಧಿಕಾರಿಯಾಗಲೀ ಪ್ರಸ್ತಾಪಿಸಿರುವುದಿಲ್ಲ.ಅಂಥ ನಿರ್ಣಯವು ಇಲ್ಲದಿರುವಲ್ಲಿ, ದೂರದೃಷ್ಟಿಯುಳ್ಳ ಮನಸ್ಥಿತಿ ಮಾತ್ರವೇ ವಿಚಾರಣಾಧಿ ಕಾರಿಗಳು ಉದ್ದೇಶಪೂರ್ವಕವಾಗಿ ಸಾಕ್ಷ್ಯದ ವಸ್ತು ವಿಷಯವನ್ನು ಅಲಕ್ಷಿಸಿರುತ್ತಾರೆಂಬುದನ್ನು ಕಂಡುಕೊಳ್ಳುತ್ತದೆಂಬುದು ಅನಿವಾರ್ಯವಾದ ತೀರ್ಮಾನವಾಗಿರುತ್ತದೆ.ಹಾಗಾಗಿ, ಇದನ್ನು ನಿರರ್ಥಕಗೊಳಿಸಲಾಗಿರುತ್ತದೆ.

54. ವಿಚಾರಣಾಧಿಕಾರಿಗಳು ಉದ್ದೇಶಪೂರ್ವಕವಾಗಿ ಅಲಕ್ಷಿಸಿದಂಥ ಪ್ರಕರಣದ ನಂತರದ ನಿರರ್ಥಕ ಆಯಾಮವೆಂದರೆದಿನಾಂಕ: 24.08.2005 ಹಾಗೂದಿನಾಂಕ: 25.08.2005 ರಂದು ಡಿಪೋ ಮ್ಯಾನೇಜರ್ರವರು ಕಳುಹಿಸಿದ ವರದಿಗಳಾಗಿರುತ್ತದೆ.ಅರ್ಜಿದಾರರ ವಾದದ ಮೇರೆಗೆ ಕೂಡ, ವ್ಯಕ್ತಿಯು ಅನಧಿಕೃತವಾಗಿ ಗೈರುಹಾಜರಾಗಿರುತ್ತಾನೆಂದು ಅರ್ಥೈಸಿಕೊಂಡು 8 ದಿನಗಳವರೆಗೆ ನಿರಂತರವಾಗಿ ಒಬ್ಬ ವ್ಯಕ್ತಿ ಗೈರುಹಾಜರಾದಲ್ಲಿ ಮತ್ತೆ ಕೆಲಸಕ್ಕೆ ವರದಿ ಮಾಡಿಕೊಳ್ಳಲು, ವಿಭಾಗೀಂತು ನಿಯಂತ್ರಕರ ಅನುಮತಿಯನ್ನು ಪಡೆಯಲು ಅಗತ್ಯಪಡಿಸಲಾಗಿರುತ್ತದೆಂಬುದಾಗಿರುತ್ತದೆ.ಪ್ರಸ್ತುತ ಪ್ರಕರಣದಲ್ಲಿ, ಪ್ರತ್ಯರ್ಜಿದಾರನು ದಿನಾಂಕ 18.08.2005 ರಿಂದ ಗೈರುಹಾಜರಾಗಿರುತ್ತಾ ಉಳಿದಿದ್ದು, 8 ದಿನಗಳಿಗಿಂತ ಮೊದಲೇ ರಜಾ ಅರ್ಜಿಯನ್ನು ಸ್ವೀಕರಿಸಿದ್ದರೂ ಕೂಡ ಆರನೇ ದಿನವೇ ವಿಭಾಗೀಯ ನಿಯಂತ್ರಕರಿಗೆ ವರದಿಯನ್ನು ಕಳುಹಿಸಲು ಮುಂದುವರೆಯಲಾಗಿರುತ್ತದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.ಅದರೊಂದಿಗೆ, ಪ್ರತ್ಯರ್ಜಿದಾರರು ದಿನಾಂಕ 29.08.2005 ರಂದು ಕರ್ತವ್ಯಕ್ಕೆ ಹಿಂದಿರುಗಿದಾಗಲೂ ಅವರಿಗೆ ಕೆಲಸಕ್ಕೆ ವರದಿ ಮಾಡಿಕೊಳ್ಳುವುದರಿಂದ ನಿರಾಕರಿಸಲಾಯಿತು.ಅಲ್ಲದೆ, ರಜಾ ಅರ್ಜಿಯನ್ನು ಡಿಪೋ ಮ್ಯಾನೇಜರ್ ತಿರಸ್ಕರಿಸಿದ ಯಾವುದೇ ಆದೇಶ ಅಥವಾ ನಡಾವಳಿಗಳನ್ನು ಪ್ರತ್ಯರ್ಜಿದಾರ-ಕಾರ್ಮಿಕನಿಗೆ ಕಳುಹಿಸಿರುವುದಿಲ್ಲವೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.ಅಲ್ಲದೆ, ದಿನಾಂಕ 29.8.2005 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡ ವಾಸ್ತವಾಂಶವನ್ನು ವಿಭಾಗೀಯ ನಿಯಂತ್ರಕರ ಗಮನಕ್ಕೆ ತರಲಾದರೂ, ಯಾವುದೇ ಗುರುತರ ಕ್ರಮ ಕೈಗೊಳ್ಳದೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಮತಿಸಿರುವುದರಲ್ಲಿಯೂ ಯಾವುದೇ ವಿವಾದಾಂಶ ಇರುವುದಿಲ್ಲ.ಅಲ್ಲದೆ ಆತದಿನಾಂಕ: 29.10.2005 ರಂದು ಮರು ಸೇರ್ಪಡೆಯಾಗಿರುತ್ತಾನೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.ದಿನಾಂಕ: 5.9.2005 ರಂದು ಕಾಲ್ಲೆಟರ್ ಅನ್ನು 05.09.2005 ರಂದು ಹೊರಡಿಸಲಾಗಿತ್ತೆಂದು ವಾದಿಸಿದ್ದರೂ, ಇದನ್ನು ವಿಚಾರಣಾಧಿಕಾರಿಯ ಮುಂದಾಗಲೀ ಇಲ್ಲವೇ ಕಾರ್ಮಿಕ ನ್ಯಾಯಾಲಯದ ಮುಂದಾಗಲೀ ಮಂಡಿಸಿರುವುದಿಲ್ಲ.ಇದೊಂದೆ, ಕಾರ್ಮಿಕನ ಬಗೆಗೆ ಅರ್ಜಿದಾರ ನಿಯೋಜಕ ಸಂಸ್ಥೆಯ ಅಧಿಕಾರಿಗಳ ವರ್ತನೆ ಹಾಗೂ ಅಸಹನೆಯನ್ನು ಸಾಬೀತು ಪಡಿಸುತ್ತದೆ.ಅಲ್ಲದೆ, ಇದು ಅರ್ಜಿದಾರ ಸಂಸ್ಥೆಯ ಅಧಿಕಾರಿಗಳು ಅವರ ಉದ್ದೇಶವನ್ನು ಈಡೇರಿಸಿಕೊಳ್ಳಲು ಯಾವ ಮಟ್ಟಕ್ಕೆ ಬೇಕಾದರು ಇಳಿಯುತ್ತಾರೆಂಬ ವಾಸ್ತವಾಂಶದ ಸೂಚಕವು ಆಗಿದೆ. ಅರ್ಜಿದಾರ ಸಂಸ್ಥೆಯು, ನ್ಯಾಯಾಧಿಕರಣದ ಮುಂದೆ ಹೆಚ್ಚುವರಿ ಸಾಕ್ಷ್ಯವನ್ನು ಮಂಡಿಸಿ, ಇಷ್ಟಕ್ಕೆಲ್ಲಾ ಎಡೆ ಮಾಡಿಕೊಟ್ಟು, ಈಗ ನ್ಯಾಯಾಧಿಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯವು ರೂಪಿಸಿದ ಚ ಮಾನದಂಡಗಳನ್ನು ಉಲ್ಲಂಘಿಸಿದೆಯೆಂದು ಹೇಳುತ್ತಿರುವ ಅಹವಾಲನ್ನು ಒಪ್ಪಿಕೊಳ್ಳಲಾಗುವುದಿಲ್ಲ.ನ್ಯಾಯಾಧಿಕರಣದ ಮುಂದೆ ಹೆಚ್ಚುವರಿ ಸಾಕ್ಷ್ಯವನ್ನು ಮಂಡಿಸದ ಹೊರತು ಹಾಗೂ ಅದರ ಆಧಾರದ ಮೇಲೆ ನಿರ್ಣಯವನ್ನು ಸಲ್ಲಿಸಲು ನ್ಯಾಯಾಧಿಕರಣಕ್ಕೆ ಸೂಚಿಸದ

ಹೊರತು, ಅರ್ಜಿದಾರ ಸಂಸ್ಥೆಯನ್ನು ವಾದಿಸುವುದರಿಂದ ನಿರ್ಬ ೦ ಧಿಸಲಾಗುವುದಿಲ್ಲ.ಅರ್ಜಿದಾರ ಸಂಸ್ಥೆಯು ಅನುಮತಿಸುವಂತಿಲ್ಲ ಹಾಗೂ ನಿರಾಕರಿಸುವಂತಿಲ್ಲ.ಅದರೊಂದಿಗೆ, ನ್ಯಾಯಾಧಿಕರಣವು ವಸ್ತು ವಿಷಯವನ್ನು ೨ ಪರಿಶೀಲಿಸುವಲ್ಲಿ ಹಾಗೂ ಅದರ ಮುಂದೆ ಮಂಡಿಸಲಾದ ಹೆಚ್ಚುವರಿ ಸಾಕ್ಷ್ಯವನ್ನು ಆಧರಿಸಿ ಅರ್ಜಿದಾರ ಸಂಸ್ಥೆಯು ತನ್ನ ನೌಕರನಿಗೆ ತೊಂದರೆ ನೀಡಿರುವ ತಪ್ಪಿತಸ್ಥ ಸಂಸ್ಥೆಯಾಗಿರುತ್ತದೆಂಬ ನಿರ್ಣಯವನ್ನು ನೀಡುವಲ್ಲಿ ಸಮರ್ಥನೀಯವಾಗಿರುತ್ತದೆ.

55. ಅರ್ಜಿದಾರ ಸಂಸ್ಥೆಯು ಕಾರ್ಮಿಕ ನ್ಯಾಯಾಲಯದ ಮುಂದೆ ಮಂಡಿಸಿದ ಹೆಚ್ಚುವರಿ ಸಾಕ್ಷ್ಯಗಳೊಂದಿಗೆ ತಮ್ಮ ಆರೋಪಗಳಿಗೆ ಪೂರಕವಾಗಿ ಮತ್ತೆರಡು ಸಾಕ್ಷಿಗಳನ್ನು ಪರಿಶೀಲಿಸಿರುತ್ತಾರೆ.ವಾಸ್ತವವಾಗಿ ಎಡಬ್ಲ್ಯೂ ಅನ್ನು, ವಿಸ್ತೃತ ೧ ಪಾಟ್ ಸವಾಲಿನ ಮೂಲಕ ಈ ಹಿಂದೆ ಆಪಾದಿಸಲಾದ 30 ದುರ್ವತ್ರನೆಗಳ ಬಗೆಗೆ ಹಾಗೂ ಸರಣಿ ಆಪಾದಿತನಂತೆ ಅವನನ್ನು ಪ್ರತಿಪಾದಿಸಲು ಅರ್ಜಿದಾರ ಸಂಸ್ಥೆಯು ಮಾಡುತ್ತಿರುವ ಪ್ರಯತ್ನವನ್ನು ನಿರರ್ಥಕಗೊಳಿಸಲು ತನಿಖೆ ಮಾಡಲಾಯಿತು.ಅದರ ಮುಂದೆ ಮಂಡಿಸಿದ ಹೆಚ್ಚುವರಿ ಸಾಕ್ಷ್ಯದ ಆಧಾರದ ಮೇಲೆ ನಿರ್ಣಯವನ್ನು ನೀಡಲು ಕಾರ್ಮಿಕ ನ್ಯಾಯಾಲಯವನ್ನು ಆಹ್ವಾನಿಸಿದ್ದರಿಂದ, ಇದರ ಬಗೆಗೆ ದೂರುತ್ತಿರುವ ಅರ್ಜಿದಾರರ ಆಪಾದನೆಯನ್ನು ಪರಿಗಣಿಸಲಾಗುವುದಿಲ್ಲ.

56. ಸಮುಚಿತವಾದ ಮತ್ತೊಂದು ವಿಷಯವೆಂದರೆ, ಐ.ಎ.ಸಂ .1 ನ್ನು ಕೈಗಾರಿಕಾ ವಿವಾದಗಳ ಅಧಿನಿಯಮದ 11 ನೇ ಪ್ರಕರಣದಡಿಯಲ್ಲಿ ಪ್ರತ್ಯರ್ಜಿದಾರನು ಸಲ್ಲಿಸಿರುವುದಾಗಿರುತ್ತದೆ.ಸದರಿ ಅರ್ಜಿಯನ್ನು, ಈ ಮುಂದಿನಂತೆ ಹೆಚ್ಚುವರಿ ವಿಷಯವನ್ನು ರೂಪಿಸಲು ಕಾರ್ಮಿಕ ನ್ಯಾಯಾಲಯವನ್ನು ಕೋರಿ ಸಲ್ಲಿಸಿದುದಾಗಿರುತ್ತದೆ.

" ಶಿಸ್ತು ಪ್ರಾಧಿಕಾರ/ಅರ್ಜಿದಾರ ಸಂಸ್ಥೆಗೆ ಪ್ರತ್ಯರ್ಜಿದಾರನ ಬಗೆಗೆ ವೈಯಕ್ತಿಕ ದ್ವೇಷವಿದ್ದು, ಅದರಿಂದ, ಆತನನ್ನು ವಜಾ ಮಾಡಿರುವ ಆದೇಶವನ್ನು ಹೊರಡಿಸಿ ಅಧಿಕೃತ ಶಿಸ್ತುಪ್ರಾಧಿಕಾರದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳಲಾಯಿತೆ ಎಂಬುದನ್ನು ಪ್ರತ್ಯರ್ಜಿದಾರನು ರುಜುವಾತುಪಡಿಸಿರುತ್ತಾನೆಯೆ "

57. ನೌಕರನು ಸದರಿ ಅರ್ಜಿಗೆ ಪೂರಕವಾಗಿ ಕೋರಿದ ಪರಿಹಾರ ಹಾಗೂ ನೀಡಿದ ಆಧಾರಗಳು ಮೇಲ್ನೋಟಕ್ಕೆ, ನಿಗಮದಲ್ಲಿ ಕೆಲವು ಅಧಿಕಾರಿಗಳು ನೌಕರರನ್ನು ತೊಂದರೆಗೆ ಒಳಪಡಿಸುತ್ತಾರೆ ಹಾಗೂ ಕೆಲಸಗಾರರನ್ನು ಅನುಚಿತವಾಗಿ ನಡೆಸಿಕೊಳ್ಳುತ್ತಾರೆಂಬುದನ್ನು ನಿರೂಪಿಸುತ್ತವೆ.ವಾಸ್ತವವಾಗಿ, ನೌಕರನಿಂದ ಸಲ್ಲಿಸಲಾದ ಐ.ಎ.ಸಂ. III ರಲ್ಲಿ ವಿಚಾರಣಾಧಿಕಾರಿಯ ಮುಂದೆ ಗುರುತು ಮಾಡಿರುವ ಹಾಜರಾತಿ ವಹಿಯ ಉದ್ಧೃತ ಭಾಗವು ಅಕ್ರಮವಾಗಿ ತಿದ್ದಿದ ಪ್ರತಿಯಾಗಿದ್ದು, ಮೂಲ ಪ್ರತಿಯನ್ನು ಹಾಜರುಪಡಿಸಲು ನಿರ್ದೇಶಿಸಬೇಕೆಂದು ಕೋರಿರುತ್ತಾನೆ.ಸದರಿ ಅರ್ಜಿಯನ್ನು ಅಂಗೀಕರಿಸಲಾಯಿತು. ವಾಸ್ತವವಾಗಿ ಎ 1 ರಿಂದ 26 ರ ವರೆಗಿನ ನಿಶಾನೆಗಳನ್ನು ವಿಚಾರಣಾಧಿಕಾರಿಗಳಾದ ರಂಗಸ್ವಾಮಿಯವರು ಗುರುತು ಮಾಡಿರುತ್ತಾರೆ.ಇವರು ಅರ್ಜಿದಾರ-ನಿಗಮದಲ್ಲಿ ಸೇವೆ ಸಲ್ಲಿಸುತ್ತಿದ್ದಂಥ ನಿವೃತ್ತ ಜಂಟಿ ಕಾನೂನು ಅಧಿಕಾರಿಗಳಾಗಿರುತ್ತಾರೆ.ಪಾಟೀ ಸವಾಲಿನಿಂದ ಹೊರ ಬಂದಂಥ ಉತ್ತರಗಳು ಕುತೂಹಲದ ಓದಿಗೆ ಕಾರಣವಾಗಿವೆ.2006 ರಲ್ಲಿನ ಆತನ ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂಥ ವಿಚಾರಣೆಯಲ್ಲಿ, ತನಗೆ ಅದ್ಯಾವುದು ನೆನಪಿಲ್ಲವೆಂದು ಹೇಳುತ್ತಾನೆ.ಸದರಿ ವಿಚಾರಣೆಯಲ್ಲಿಯೇ ಆಡಳಿತ ಮಂಡಳಿಯು ಯಾವ ಸಾಕ್ಷ್ಯವನ್ನು ಪರೀಕ್ಷಿಸಲಿಲ್ಲವೆಂಬ ಪ್ರಶ್ನೆಗೂ ಇಂಥದೇ ಉತ್ತರವನ್ನು ನೀಡಿರುತ್ತಾನೆ.ವಾಸ್ತವವಾಗಿ, ಆರೋಪಗಳ ಪಟ್ಟಿ ಅಂದರೆ ನಿಶಾನೆ- ಎ 1 ರಲ್ಲಿ ತೋರಿಸಿದ ನಿರೂಪಣೆ ಹಾಗೂ ನಿಶಾನೆ ಎ 4, ಎ 12, ಎ 13, ಎ 14, ಎ 16, ಎ 18, ಎ 19 ಹಾಗೂ ಎ 25 ರಲ್ಲಿ ವಿವರಿಸಲಾದ ಪ್ರತ್ಯರ್ಜಿದಾರನ ನಿರೂಪಣೆ ಭಿನ್ನವಾಗಿವೆ ಎಂಬುದನ್ನು ಒಪ್ಪಿಕೊಂಡಿರುತ್ತಾನೆ.ಅಲ್ಲದೆ, ಕರ್ತವ್ಯಚ್ಯುತ ನೌಕರನು ಆರೋಪಗಳ ಪಟ್ಟಿಗೆ ತನಗೆ ಏಕೆ ಉತ್ತರಿಸಲಾಗಲಿಲ್ಲ ಎಂಬುದನ್ನು ವಿವರಿಸಿರುತ್ತೇನೆಂದೂ ಒಪ್ಪಿಕೊಂಡಿರುತ್ತಾನೆ.ಈತ ತನ್ನ ವಿಚಾರಣಾ ವರದಿಯಲ್ಲಿ ವಿಷಯವನ್ನು ಪರಿಗಣಿಸಿರುವುದಿಲ್ಲ ಇಲ್ಲವೇ ತಿರಸ್ಕರಿಸಲು ಕಾರಣಗಳನ್ನು ಹೇಳಿರುವುದಿಲ್ಲವೆಂದೂ ಒಪ್ಪಿಕೊಂಡಿರುತ್ತಾನೆ.ಇವುಗಳು ಪಾಟೀ ಸವಾಲಿನಲ್ಲಿ ಸುಮಾರು ಇಪ್ಪತ್ತು ಪುಟಗಳಷ್ಟು ದಾಖಲಾಗಿರುವಂಥ ಕೆಲವು ಒಪ್ಪಿತ ವಿಷಯಗಳಾಗಿರುತ್ತವೆ.ವಾಸ್ತವವಾಗಿ, ಸುಮಾರು 25 ಮುಂದೂಡಿಕೆಗಳನ್ನು ಅರ್ಜಿದಾರ-ನೌಕರನ ಕೋರಿಕೆ ಮೇಲೆ ನೀಡಲಾಗಿದೆಯೆಂದು,ದಿನಾಂಕ: 05.09.2008 ರಿಂದ 16.04.2009 ರ ನಡುವಿನ ದಿನಾಂಕಗಳಲ್ಲಿ ಮಂಡನಾಧಿಕಾರಿಯಾಗಲೀ ಇಲ್ಲವೇ ನಿಯೋಜಕರ ಸಾಕ್ಷೀದಾರರಾಗಲೀ ಹಾಜರಾಗಿರುವುದಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾನೆ.ಅಲ್ಲದೆ ಈತ ವಿಚಾರಣಾಧಿಕಾರಿಯ ವಿರುದ್ಧ ದೂರು ನೀಡಿದ ಪ್ರತ್ಯರ್ಜಿದಾರನ ಪತ್ನಿ ಅಂದರೆ ಸಾಕ್ಷಿಯು

ವಿಚಾರಣಾಧಿಕಾರಿಯು ಆಕೆಯ ವಿರುದ್ಧ ಮೂರು ಸಂದರ್ಭಗಳಲ್ಲಿ ಸುಳ್ಳು ವರದಿಗಳನ್ನು ನೀಡಿರುತ್ತಾರೆಂದು ಹೇಳಿಕೆಯನ್ನು ಒಪ್ಪಿಕೊಂಡಿರುತ್ತಾರೆ.

58. ಆ ತರುವಾಯ, ಎಡಬ್ಲ್ಯೂ 2 ಎಂದು ಮೇಲ್ವಿಚಾರಕರನ್ನು ಪರೀಕ್ಷಿಸಲಾಯಿತು.ಅಫಿಡಾವಿಟ್ಟಿನ ರೂಪದಲ್ಲಿನ ಸಾಕ್ಷ್ಯವನ್ನು ಪರಿಶೀಲಿಸಿದ ಮೇಲೆ, ಸದರಿ ಎಡಬ್ಲ್ಯೂ .2 ರವರ ಸಾಕ್ಷ್ಯದಲ್ಲಿ ಪ್ರತ್ಯರ್ಜಿದಾರನ ಸೇವೆಯು ತುಂಬಾ ಅತೃಪ್ತಿದಾಯಕವಾಗಿತ್ತೆಂದೂ, ಪ್ರತ್ಯರ್ಜಿದಾರರು 31 ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಎಲ್ಲಾ ಪ್ರಕರಣಗಳಲ್ಲೂ ಅಲ್ಪ ಪ್ರಮಾಣದ ದಂಡನೆಯನ್ನೇ ವಿಧಿಸಲಾಗಿತ್ತೆಂದು ಸಾಕ್ಷ್ಯದ 3 ಪ್ಯಾರಾಗಳಿಂದ ತಿಳಿದುಬಂದಿರುತ್ತದೆ.ಈ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಕಾರ್ಮಿಕ ನ್ಯಾಯಲಯವು, ಪಾಟಿ ಸವಾಲಿನಲ್ಲಿ ಸಾಕ್ಷಿಯು, ಕಾನೂನಿಗನುಸಾರವಾಗಿ ದಂಡನೆಯನ್ನು ವಿಧಿಸಿರುವ ಒಂದೇ ಒಂದು ಸಂದರ್ಭವನ್ನಾಗಲೀ ಇಲ್ಲವೇ ಕಾರ್ಮಿಕ ನ್ಯಾಯಾಲಯದ ಮುಂದೆ ಮಂಡಿಸಿದ ದಂಡನೆಯ ಆದೇಶಗಳನ್ನಾಗಲೀ ಸುಸ್ಥಾಪಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

59. ಮೇಲಿನ ಈ ಸಂದರ್ಭಕ್ಕೆ ಅನ್ವಯವಾಗದ ತೀರ್ಪುಗಳು ಹಾಗೂ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಐದು ಪುಟಗಳಲ್ಲಿ ದಾಖಲಾಗಿರುವ ಪಾಟೀ ಸವಾಲಿಗೆ ತನ್ನ ಗಮನವನ್ನು ನೀಡಿರುತ್ತದೆ.ಇದನ್ನು ವಿವರವಾಗಿ ಪರಿಶೀಲಿಸಿದ ತರುವಾಯ, ಈ ನ್ಯಾಯಾಲಯವು, ಕಾರ್ಮಿಕ ನ್ಯಾಯಾಲಯವು ನೀಡಿದ ನಿರ್ಣಯಕ್ಕೆ ಸಮ್ಮತಿಸಿದೆ.ವಾಸ್ತವವಾಗಿ, ' ಅಫಿಡಾವಿಟ್ಟಿನ ರೂಪದಲ್ಲಿನ ಬಾಧಕ ಕುರಿತಂತೆ ಅಪೀಲುದಾರನ ಹೆಚ್ಚಿನ ಸಾಕ್ಷಿ 9 ಎಂಬ ಶೀರ್ಷಿಕೆಯಿರುವಂಥ ದಿನಾಂಕ 22.08.2012 ರ ಹೆಚ್ಚಿನ ಸಾಕ್ಷ್ಯದ ಮೂಲಕ ಪ್ರತ್ಯರ್ಜಿದಾರರು ಅಸಂಖ್ಯಾತ ಸಂದರ್ಭಗಳನ್ನು ವಿವರಿಸಿರುತ್ತಾರೆ.ಅಲ್ಲದೆ ಆಪಾದನೆಗಳಿಗೆ ಪೂರಕವಾಗಿ ನಿಶಾನೆ ಆರ್ .22 ರಿಂದ ಆರ್ .96 ರ ವರೆಗೆ ಗುರುತು ಮಾಡಿರುತ್ತಾರೆ.ಇವರು ಅಫಿಡಾವಿಟ್ಟಿನ ರೂಪದಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ಸಲ್ಲಿಸಿರುತ್ತಾರೆ.ಅಲ್ಲದೆ, ಆರ್ .97 ರಿಂದ ಆರ್ .100 ರ ವರೆಗಿನ ನಿಶಾನೆಗಳನ್ನು ಗುರುತು ಮಾಡಿರುತ್ತಾರೆ.ಅಂಥ ವಿವರಣಾತ್ಮಕ ಅಫಿಡಾವಿಟ್ಟು ಹಾಗೂ ಸಾಕ್ಷ ಎಲಾ ಕುರಿತಂತೆ ಅರ್ಜಿದಾರ ನಿಯೋಜಕರು ಮಾಡಿದ ಪಾಟೀ ಸವಾಲು ಉದಾಸೀನ ಸ್ವರೂಪದ್ದಾಗಿತ್ತೆಂಬುದನ್ನು ಗಮನಿಸಿಕೊಳ್ಳಬೇಕಾಗಿರುವುದು ಸೂಕ್ತವಾದುದಾಗಿರುತ್ತದೆ.

60. ಪ್ರತ್ಯರ್ಜಿದಾರ ನೌಕರನು ಬಾಧಕವುಂಟು ಮಾಡುವ ಹಾಗೂ ಅನುಚಿತವಾಗಿ ನಡೆಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಮಾಡಿದ ಎಲ್ಲಾ ಆಪಾದನೆಗಳನ್ನು, ಅರ್ಜಿದಾರ-ನಿಯೋಜಕ ಸಂಸ್ಥೆಯು ನಿರಾಕರಿಸಿದರೇ ಹೊರತು ಅವುಗಳಿಗೆ ವಿರುದ್ಧವಾಗಿ ರುಜುವಾತುಪಡಿಸಿದಂಥ ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.ಪ್ರತ್ಯರ್ಜಿದಾರನ ಆಪಾದನೆಗಳನ್ನು ವಿರೋಧಿಸುವಂಥ ದಸ್ತಾವೇಜೀಯ ಅಥವಾ ಮೌಖಿಕ ಸಾಕ್ಷ್ಯಗಳು ಇಲ್ಲದಿರುವುದರಿಂದ, ಪ್ರತ್ಯರ್ಜಿದಾರ ನೌಕರನು ನಿಯೋಜಕ ನಿಗಮದ ಅಧಿಕಾರಿಗಳಿಂದ ತೊಂದರೆಗೆ ಒಳಗಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುವುದು ಸರಿಯಾದುದೇ ಆಗಿರುತ್ತದೆ.ನೌಕರನು ಮಾಡಿದ ಆಪಾದನೆಗಳು ಟೊಳ್ಳಾದ ಅಥವಾ ಅಸ್ಪಷ್ಟವಾದ ಅಥವಾ ಸಂದಿಗ್ಧವಾದ ಆಪಾದನೆಗಳಾಗಿರುವುದಿಲ್ಲ.ವಾಸ್ತವವಾಗಿ ಈತ ಹೆಸರಿಸಿದ ಅಧಿಕಾರಿಗಳು ಈತನ ಬಗೆಗೆ ಹಗೆ ಸಾಧಿಸುವಂಥವರೇ ಆಗಿರುತ್ತಾರೆ.

61. ಮೇಲಿನ ಚರ್ಚೆಯಿಂದ, ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಬರಬಹುದಾದ ಒಂದೇ ತೀರ್ಮಾನವೆಂದರೆ, ನಿಯೋಜಕ ನಿಗಮದ ಕೆಲವು ಅಧಿಕಾರಿಗಳು, ಅವರ ವಿಕೃತತೆಯನ್ನು ಸಾಧಿಸಿಕೊಳ್ಳಲು ಪ್ರತ್ಯರ್ಜಿದಾರ-ನೌಕರನಿಗೆ ತೊಂದರೆ ಕೊಡುವ ಒಂದೇ ಉದ್ದೇಶದಿಂದ ಆತನನ್ನು ಭೇಟೆಯಾಡಿದ್ದಾರೆ ಎಂಬುದೇ ಆಗಿರುತ್ತದೆ.ಪ್ರತ್ಯರ್ಜಿದಾರ ನೌಕರನಿಗೆ, ವ್ಯಕ್ತಿಗೌರವಕ್ಕೆ ಹಾನಿಯುಂಟು ಮಾಡಿದ, ನಿಗಮದ ಸೇವೆ ಸಲ್ಲಿಸುವುದರಿಂದ ವಂಚಿತನನ್ನಾಗಿಸಿದ ಮತ್ತು ನೋವು ಹಾಗೂ ಸಹಿಸಲು ಸಾಧ್ಯವಾಗದಷ್ಟು ತೊಂದರೆಗಳನ್ನು ನೀಡಿದ ನಿಯೋಜಕ ನಿಗಮ ಹಾಗೂ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪ್ರತ್ಯರ್ಜಿದಾರ ನೌಕರನಿಗೆ ಸ್ವಾತಂತ್ರ ನೀಡಬೇಕೆಂಬುದು ನಮ್ಮ ಅಭಿಪ್ರಾಯವಾಗಿರುವುದರಿಂದ ಪ್ರತ್ಯರ್ಜಿದಾರ ನೌಕರನಿಗೆ ವೆಚ್ಚವನ್ನು ವಿಧಿಸುವುದರಿಂದ ನಿರ್ಬಂಧಿಸಲಾಗಿರುತ್ತದೆ.ಈ ಸಂದರ್ಭದಲ್ಲಿ, ಪ್ರತ್ಯರ್ಜಿದಾರ ನೌಕರನು ಅಂಥ ಕ್ಲೇಮುಗಳನ್ನು ಮಾಡಿದ್ದು, ಈ ಸಂದರ್ಭದಲ್ಲಿ ಅರ್ಜಿದಾರ--ನಿಗಮವು ಇದನ್ನು ಸಂದಾಯ ಮಾಡತಕ್ಕದ್ದೆಂದೂ, ತರುವಾಯ ಸಂಬಂಧಪಟ್ಟ

ಅಧಿಕಾರಿಗಳಿಂದ ಸದರಿ ಮೊಬಲಗನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ತೀರ್ಪು ನೀಡಲಾಗಿರುತ್ತದೆ.

62. ಮೇಲಿನ ಚರ್ಚೆಯ ಹಿನ್ನಲೆಯಲ್ಲಿ, ಈ ನ್ಯಾಯಾಲಯವು, ಅರ್ಜಿಯು ಅನೂರ್ಜಿತವಾಗಿದೆಯೆಂದು ಅಭಿಪ್ರಾಯ ಪಟ್ಟಿದ್ದು ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

63. ಅರ್ಜಿದಾರರಿಗೆ ಪ್ರತ್ಯೇಕವಾಗಿ ವ್ಯವಹರಿಸಲು ಸ್ವತಂತ್ರ್ಯವನ್ನು ನೀಡಿರುವುದರಿಂದ ಯಾವುದೇ ವೆಚ್ಚಗಳನ್ನು ವಿಧಿಸಿರುವುದಿಲ್ಲ.ತದನುಸಾರವಾಗಿ, ಸೂಕ್ತ ನಡಾವಳಿಗಳನ್ನು ಆರಂಭಿಸಲು ಅರ್ಜಿದಾರರಿಗೆ ಸ್ವತಂತ್ರವನ್ನು ನೀಡಿರುವುದರಿಂದ ಮಧ್ಯಂತರ ಆದೇಶ ಸಂಖ್ಯೆ .1 ನ್ನು ವಿಲೆಯಾಗಿದೆಯೆಂದು ಭಾವಿಸಬೇಕಾಗುತ್ತದೆ.

ರಿಟ್ ಅರ್ಜಿಯನ್ನು ವಜಾ ಮಾಡಿರುವುದರಿಂದ ಐ.ಎ.ಸಂಖ್ಯೆ .2 ಹಾಗೂ 3 ಪರಿಗಣನೆಗೆ ಊರ್ಜಿತವಾಗುವುದಿಲ್ಲ.